# ದಿನಾಂಕ: 16-06-2022 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 36ನೇ ಸಭೆಯ ನಡವಳಿಗಳು

**: ಅಧ್ಯಕ್ಷತೆ :**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್**

**ಸನ್ಮಾನ್ಯ ಕಾರ್ಮಿಕ ಸಚಿವರು**

**ಹಾಗೂ**

**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.**

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿ ಸದಸ್ಯರುಗಳು:**

1. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದ್ ಮಜ್ದೂರ್ ಸಭಾ, ಬೆಂಗಳೂರು
2. ಶ್ರೀ ವೆಂಕಟೇಶ್ ವಿ., ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು
3. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
4. ಶ್ರೀ ಶಂಕರ್ ಸುಲೇಗಾನ್, ಅಧ್ಯಕ್ಷರು. ಭಾರತೀಯ ಮಜ್ದೂರ್ ಸಂಘ, ಬೆಂಗಳೂರು

**ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮ ನಿರ್ದೇಶಿತ ಸದಸ್ಯರು:**

1. ಶ್ರೀ ಮನೋಜ್ ಜೈನ್, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು
3. ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು-ಇವರ ಪರವಾಗಿ ಶ್ರೀ ರಾಮದುರ್ಗಾ ಪ್ರಸಾದ್, ಸಹಾಯಕ ಕಲ್ಯಾಣ ಆಯುಕ್ತರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು-ಇವರ ಪರವಾಗಿ ಶ್ರೀಮತಿ ಭಾಗ್ಯಶ್ರೀ ಹೆಚ್.ಎಸ್., ಉಪ ನಿರ್ದೇಶಕರು,
5. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು-ಇವರ ತಾಂತ್ರಿಕ ಸಹಾಯಕರು.

**ಗೈರು ಹಾಜರಿದ್ದವರು: -**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು
2. ಅಧ್ಯಕ್ಷರು, ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾ, ಬೆಂಗಳೂರು
3. ಅಧ್ಯಕ್ಷರು, CREDAI, ಬೆಂಗಳೂರು.
4. ಅಧ್ಯಕ್ಷರು, Construction Federation of India, New Delhi.

ಮಂಡಳಿಯ ಜಂಟಿ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಸನ್ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಇವರಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕ&ಇನಿಕಾಕ ಮಂಡಳಿ ಮತ್ತು ಮಂಡಳಿಯ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಮಂಡಳಿಯ 36ನೇ ಸಭೆಯನ್ನು ನಡೆಸಿಕೊಡಬೇಕೆಂದು ಸನ್ಮಾನ್ಯ ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಮಿಕ ಸಚಿವರನ್ನು ಕೋರಿಕೊಂಡರು.

ಸನ್ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಮಾತನಾಡುತ್ತಾ, ದಿವಂಗತ ಶ್ರೀ ಪ್ರಕಾಶಂ, ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು ಇವರು ತೀವ್ರ ಹೃದಯಾಘಾತದಿಂದ ದಿನಾಂಕ: 30-04-2022ರಂದು ನಿಧನ ಹೊಂದಿದ್ದು, ಇವರು ಕಾರ್ಮಿಕರ ಶ್ರೇಯೋಬಿವೃದ್ಧಿಗಾಗಿ ಶ್ರಮಿಸಿರುತ್ತಾರೆ ಎಂದು ತಿಳಿಸಿ, ಮಾನ್ಯ ಸಚಿವರೊಂದಿಗೆ ಅವರು ಮಾಡಿದ ಕೆಲಸಕಾರ್ಯಗಳನ್ನು ಜ್ಞಾಪಿಸಿಕೊಂಡರು. ಅವರ ಮರಣವು ಮಂಡಳಿಗೆ ಹಾಗೂ ಕಾರ್ಮಿಕ ವರ್ಗಕ್ಕೆ ತುಂಬಲಾರದ ನಷ್ಟವಾಗಿದ್ದು, ಕಾರ್ಮಿಕ ವರ್ಗದವರಿಗೆ ಹಾಗೂ ಅವರ ಕುಟುಂಬಕ್ಕೆ ಅವರ ಅಗಲುವಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ತಿಳಿಸಿದರು. ನಂತರ ಸಭೆಯು ಮೌನಾಚರಣೆ ಮಾಡುವುದರ ಮೂಲಕ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಮತ್ತು ದಿವಂಗತ ಪ್ರಕಾಶಂ ರವರ ಸ್ಥಾನಕ್ಕೆ ಶ್ರೀ ವೆಂಕಟೇಶ್ ಇವರು ಆಯ್ಕೆಯಾಗಿರುತ್ತಾರೆಂದು ಸಭೆಗೆ ತಿಳಿಸಿದರು ಹಾಗೂ ಶ್ರೀ ಪ್ರಕಾಶಂ ಇವರ ಕುಟುಂಬಸ್ಥರಿಗೆ ಮಂಡಳಿ ವತಿಯಿಂದ ರೂ.3.00 ಲಕ್ಷ ಮೊತ್ತದ ಸಹಾಯಧನ ನೀಡಲಾಗುವುದೆಂದು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು ಸಂತ್ರಸ್ತ ಕುಟುಂಬಕ್ಕೆ ಸಂತಾಪ ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷದ ಮೌನಾಚರಣೆಯನ್ನು ಆಚರಿಸಲಾಯಿತು.

ಮಂಡಳಿಯ ಕಾರ್ಯದರ್ಶಿಯವರು ಕಾರ್ಯಸೂಚಿಯನ್ವಯ ದಿನಾಂಕ: 03-02-2022 ರಂದು ನಡೆದ ಮಂಡಳಿ ಸಭೆಯ ನಡವಳಿಗಳನ್ನು ಓದಿದರು ಮತ್ತು ಅದನ್ನು ಸ್ಥಿರೀಕರಿಸಲು ಸಭೆಯನ್ನು ಕೋರಿದರು. ಹಾಜರಿದ್ದ ಮಂಡಳಿಯ ಸದಸ್ಯರೆಲ್ಲರ ಸಹಮತದೊಂದಿಗೆ ಮಂಡಳಿಯ 35ನೇ ಸಭೆಯ ನಡುವಳಿಗಳಿಗೆ ಒಪ್ಪಿಗೆ ಸೂಚಿಸಿ 35ನೇ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲಾಯಿತು.

## ವಿಷಯ ಸಂಖ್ಯೆ-03

**ಮಂಡಳಿಯ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ 10 ರಿಂದ 15 ಜನ ಮಕ್ಕಳಿಗೆ Pilot Training ನೀಡಲು ಕೆಟಿಪಿಪಿ ನಿಯಮಾನುಸಾರ ಇ-ಟೆಂಡರ್ ಕರೆದು ಸಂಸ್ಥೆಯನ್ನು ಆಯ್ಕೆ ಮಾಡಲು ಅನುಮೋದನೆ ನೀಡುವ ಕುರಿತು.**

ಮಂಡಳಿಯ ನೋಂದಾಯಿತ ಫಲಾನುಭವಿಗಳ ಅವಲಂಭಿತರಿಗೆ ವಿವಿಧ ರೀತಿಯ ತರಬೇತಿ ಹಾಗೂ ಸೌಲಭ್ಯವನ್ನು ಒದಗಿಸಲು ಶ್ರಮ ಸಂಸಾರ ಸಾಮರ್ಥ್ಯ ಯೋಜನೆಯನ್ನು ರೂಪಿಸಲಾಗಿರುತ್ತದೆ. ಈ ಯೋಜನೆಗಾಗಿ 2022-23ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.70.00 ಕೋಟಿ ಮೊತ್ತವನ್ನು ಮೀಸಲಿಟ್ಟು ಸರ್ಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಈ ಯೋಜನೆಯಡಿ ವಿಮಾನ ಚಾಲನೆ ತರಬೇತಿ (**Pilot Training**) ಪಡೆಯಲು ಅರ್ಹ ವಿದ್ಯಾರ್ಹತೆಯನ್ನು ಹೊಂದಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರ ಪೈಕಿ ಮಂಡಳಿಯ

ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿದ್ದಲ್ಲಿ ಹಿರಿತನದ ಆದಾರದ ಮೇಲೆ 25 ರಿಂದ 30 ಜನ ಮಕ್ಕಳಿಗೆ ಈ ತರಬೇತಿಯನ್ನು ಪಡೆಯಲು ತಗಲುವ ಸಂಪೂರ್ಣ ವೆಚ್ಚವನ್ನು ಮಂಡಳಿಯ ವತಿಯಿಂದ ಭರಿಸಬಹುದಾಗಿರುತ್ತದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ವಿಷಯದ ಕುರಿತು ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಕರ್ನಾಟಕ ಸರ್ಕಾರದ ಕ್ರೀಡಾ ಮಂತ್ರಿ ಮತ್ತು ಪ್ರಧಾನ ಕಾರ್ಯದರ್ಶಿಗಳು ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ Pilots Training ಕೊಡಿಸಲು ಯೋಜಿಸಬೇಕೆಂದು ಕೋರಿರುತ್ತಾರೆಂದು ತಿಳಿಸುತ್ತಾ, ಸದರಿ ತರಬೇತಿಯು ನಿಶ್ಚಿತ ಉದ್ಯೋಗಾವಕಾಶ ನೀಡುವ ತರಬೇತಿಯಾಗಿದ್ದು, 18 ತಿಂಗಳ ತರಬೇತಿಗೆ ಪ್ರತಿ ಅಭ್ಯರ್ಥಿಗೆ ಸುಮಾರು ರೂ.37.00 ಲಕ್ಷಗಳು ಖರ್ಚಾಗುತ್ತದೆ. ತರಬೇತಿ ಸಂಬಂಧ ಅರ್ಜಿ ಆಹ್ವಾನಿಸಿ ಕ್ರೀಡಾ ಇಲಾಖೆಗೆ ಸಲ್ಲಿಸುವುದು. ತದನಂತರ ಕ್ರೀಡಾ ಇಲಾಖೆಯು ನಿಗಧಿತ ಮಾನದಂಡಗಳನ್ವಯ ಪೈಲೆಟ್‌ಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ ಎಂದು ತಿಳಿಸುತ್ತಾ, ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮಂಡಳಿಯ ವತಿಯಿಂದ ಸರ್ಕಾರಿ ವಿಮಾನ ಶಾಲೆ, ಜಕ್ಕೂರು, ಬೆಂಗಳೂರು ಇವರಲ್ಲಿ ಪೈಲೆಟ್ ತರಬೇತಿ ನೀಡುತ್ತಿರುವುದು ದೇಶದಲ್ಲಿಯೇ ಐತಿಹಾಸಿಕ ನಿರ್ಣಯವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ನಂತರ ಸದರಿ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-04

**ಹಾಸನ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ನಿರ್ಮಾಣ ಮಾಡಲಿರುವ ಕಾರ್ಮಿಕ ಇಲಾಖೆಯ ಕಛೇರಿ ಕಟ್ಟಡಗಳಲ್ಲಿ ಮಂಡಳಿಯ ಕೆಲಸ ಕಾರ್ಯಗಳ ಉಪಯೋಗಕ್ಕಾಗಿ ಪ್ರತ್ಯೇಕ ಮಹಡಿಯನ್ನು ಮಂಡಳಿಯ ವತಿಯಿಂದ ನಿರ್ಮಿಸಲು ಅನುದಾನ ಬಿಡುಗಡೆ ಮಾಡಲು ಅನುಮೋದನೆ ಪಡೆಯುವ ಬಗ್ಗೆ.**

ಕಾರ್ಮಿಕ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಕಛೇರಿಗಳಿಗಾಗಿ ಸ್ವಂತ ಕಟ್ಟಡಗಳನ್ನು ಹಾಸನ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ನಿರ್ಮಾಣ ಮಾಡಲಾಗುತ್ತಿರುತ್ತದೆ. ಮಂಡಳಿಯ ಕಾರ್ಯ ಚಟುವಟಿಕೆಗಳು ಕ್ಷೇತ್ರ ಮಟ್ಟದಲ್ಲಿ ಆಗಾಧವಾಗಿ ಬೆಳೆಯುತ್ತಿರುವುದರಿಂದ ಪ್ರತ್ಯೇಕ ಕಛೇರಿ ನಿರ್ಮಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಮೇಲಿನಂತೆ ಜಿಲ್ಲೆಗಳಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳಲ್ಲಿ ಪ್ರತ್ಯೇಕ ಮಹಡಿಯನ್ನು ಮಂಡಳಿಯ ಅನುದಾನದಿಂದ ನಿರ್ಮಿಸಿಕೊಳ್ಳಬಹುದಾಗಿದೆ. ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಮಂಡಳಿಯಿಂದ ಸಂಬಂಧಪಟ್ಟ ಸಂಸ್ಥೆಗೆ ಪಾವತಿಸಬಹುದಾಗಿದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಚರ್ಚಿಸುತ್ತಾ, ಕ್ಷೇತ್ರಮಟ್ಟದಲ್ಲಿ ಮಂಡಳಿಯ ಕೆಲಸಗಳು ಆಗಾಧವಾಗಿರುವುದರಿಂದ ಪ್ರತ್ಯೇಕ**

ಕಛೇರಿ ನಿರ್ಮಿಸಿಕೊಳ್ಳುವುದು ಅಗತ್ಯವಿರುತ್ತದೆ ಎಂದು ತೀರ್ಮಾನಿಸಿ, ಮಂಡಳಿಯಿಂದ ಅನುದಾನ ಬಿಡುಗಡೆ ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ವಿಷಯ ಸಂಖ್ಯೆ-05

**ಮಂಡಳಿಯು ಅನುಷ್ಠಾನಗೊಳಸುತ್ತಿರುವ ಕಾಯ್ದೆ ಮತ್ತು ನಿಯಮಗಳ ಕುರಿತು ತರಬೇತಿ ನೀಡಲು ಮತ್ತು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಅವರ ನೋಂದಣಿ ಹಾಗೂ ಸೌಲಭ್ಯಗಳ ಕುರಿತು ತರಬೇತಿ ನೀಡಲು ಮಂಡಳಿಯ ವತಿಯಿಂದ Karnataka State Labour Institute, ಬೆಂಗಳೂರು ಇವರಿಗೆ ಹಣ ಬಿಡುಗಡೆ ಮಾಡಲು ಅನುಮೋದನೆ ಪಡೆಯುವ ಕುರಿತು**

Karnataka State Labour Institute ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮಂಡಳಿಯು ಅನುಷ್ಠಾನಗೊಳಸುತ್ತಿರುವ ಕಾಯ್ದೆ ಮತ್ತು ನಿಯಮಗಳ ಕುರಿತು ಇಲಾಖೆಯ ಅಧಿಕಾರಿ/ ಸಿಬ್ಬಂಧಿಗಳಿಗೆ ತರಬೇತಿ ಹಾಗೂ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಅವರ ನೋಂದಣಿ ಪ್ರಕ್ರೀಯೆ ಮತ್ತು ಫಲಾನುಭವಿಗಳಿಗೆ ಸಿಗುತ್ತಿರುವ ಸೌಲಭ್ಯಗಳ ಕುರಿತು ತರಬೇತಿ ನೀಡುವ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗುತ್ತಿದ್ದು, ಮಂಡಳಿಯ 33 ನೇ ಸಭೆಯ ನಿರ್ಣಯದಂತೆ ಈಗಾಗಲೇ ಮಂಡಳಿಯವತಿಯಿಂದ ಬಿಡುಗಡೆ ಮಾಡಿದ ರೂ. 1.00 ಕೋಟಿಯನ್ನು ಸದರಿ ಉದ್ದೇಶಗಳಿಗೆ ಪೂರ್ಣವಾಗಿ ಬಳಸಿರುವುದಾಗಿ Utilization Certificate ಅನ್ನು ಸಲ್ಲಿಸಿ, ಮುಂದುವರೆದು, ಮಂಡಳಿಯ ವತಿಯಿಂದ ಈ ಉದ್ದೇಶಗಳಿಗಾಗಿ ರೂ.1.00 ಕೋಟಿ ಹಣ ಬಿಡುಗಡೆ ಮಾಡುವಂತೆ ಮಂಡಳಿಗೆ, ನಿರ್ದೇಶಕರು, ಕರ್ನಾಟಕ ರಾಜ್ಯ ಲೇಬರ್ ಇನ್ಸಿಟ್ಯೂಟ್, ಬೆಂಗಳೂರು ಇವರು ಪತ್ರದ ಮೂಲಕ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮತ್ತು ಸರ್ವ ಸದಸ್ಯರು ಚರ್ಚಿಸಿ ಸರ್ವಾನುಮತದಿಂದ ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ-06

**2022-2023 ನೇ ಸಾಲಿನಲ್ಲಿ ಮಂಡಳಿಯ ಆಯವ್ಯಯದಲ್ಲಿ ಶೈಕ್ಷಣಿಕ ಸಹಾಯಧನ ಸೌಲಭ್ಯ ವಿತರಣೆಗಾಗಿ ಬಜೆಟ್‌ನಲ್ಲಿ ಮೀಸಲಿರಿಸಿದ್ದ ಮೊತ್ತವನ್ನು ಹೆಚ್ಚಿಸಲು ಅನುಮೋದನೆ ನೀಡುವ ಕುರಿತು.**

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗಾಗಿ ರೂಪಿಸಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಲ್ಲಿ ಶೈಕ್ಷಣಿಕ ಸಹಾಯಧನ ಸೌಲಭ್ಯವು ಪ್ರಮುಖ ಯೋಜನೆಯಾಗಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ 2022-23ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ರೂ.400.00 ಕೋಟಿಗಳ ಮೊತ್ತವನ್ನು ಮೀಸಲಿಟ್ಟು, ಮಂಡಳಿಯಿಂದ ಹಾಗೂ ಸರ್ಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

2021-22ನೇ ಸಾಲಿನಿಂದ ಶೈಕ್ಷಣಿಕ ಸಹಾಯಧನವನ್ನು ಎಸ್‌ಎಸ್‌ಪಿ ಪೋರ್ಟ್‌ಲ್ ಮೂಲಕ ಮಂಜೂರು ಮಾಡಿ ಡಿಬಿಟಿ ಮುಖಾಂತರ ಸಹಾಯಧನ ವಿತರಣೆ ಮಾಡುತ್ತಿರುವುದರಿಂದ ನಿಗಧಿತ ಅವಧಿಯಲ್ಲಿ ಎಲ್ಲಾ ಅಭ್ಯರ್ಥಿಗಳಿಗೆ ಸಹಾಯಧನ ತಲುಪುತ್ತಿರುತ್ತದೆ. ಹಾಗಾಗಿ, 2021-22ನೇ ಸಾಲಿನಲ್ಲಿ ಒಟ್ಟು ರೂ. 460.76 ಕೋಟಿಗಳಷ್ಟು ಮೊತ್ತ ಈ ಸೌಲಭ್ಯಕ್ಕಾಗಿ ಖರ್ಚು ಮಾಡಲಾಗಿರುತ್ತದೆ.

ಆದಕಾರಣ 2022-23ನೇ ಸಾಲಿನಲ್ಲಿ ಈ ಯೋಜನೆಗಾಗಿ ಮೀಸಲಿಟ್ಟಿರುವ ರೂ.400.00 ಕೋಟಿಗಳಷ್ಟು ಮೊತ್ತವು ಕೊರತೆಯಾಗಲಿದ್ದು ಹೆಚ್ಚುವರಿಯಾಗಿ ರೂ.200.00 ಕೋಟಿಗಳಷ್ಟು ಮೊತ್ತ ಬೇಕಾಗುತ್ತದೆ. ಸದರಿ ಹೆಚ್ಚುವರಿ ಮೊತ್ತವನ್ನು 2022-23ನೇ ಆಯವ್ಯಯದಲ್ಲಿ Preventive Health Care ಯೋಜನೆಗಾಗಿ ಮೀಸಲಿಟ್ಟಿರುವ ಮೊತ್ತದಿಂದ ಬಳಸಿಕೊಳ್ಳಬಹುದಾಗಿರುತ್ತದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, 2021-22ನೇ ಸಾಲಿನಲ್ಲಿ ಶೈಕ್ಷಣಿಕ ಸಹಾಯಧನವನ್ನು ಎಸ್‌ಎಸ್‌ಪಿ ಪೋರ್ಟಲ್‌ನಲ್ಲಿ ವಿತರಿಸುತ್ತಿದ್ದು, ಇದಕ್ಕಾಗಿ ರೂ.467.76 ಕೋಟಿಗಳು ಈಗಾಗಲೆ ಖರ್ಚಾಗಿರುತ್ತದೆ. 2022-23ನೇ ಸಾಲಿನಲ್ಲಿ ಈಗಾಗಲೇ ಮೀಸಲಿಟ್ಟಿರುವ ರೂ.400.00 ಕೋಟಿ ಮೊತ್ತವು ಸಾಕಾಗದೇಯಿರುವ ಸಂಭವವಿರುತ್ತದೆ ಹಾಗೂ ಸದರಿ ಮೊತ್ತದಲ್ಲಿ 2022-23ನೇ ಸಾಲಿನಲ್ಲಿ ಉಳಿತಾಯವಾಗುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯದಲ್ಲಿ ಮರು ಹೊಂದಾಣಿಕ ಮಾಡಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ-07**

**ನಕಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗುವುದನ್ನು ತಡೆಗಟ್ಟಲು ಕ್ರಮವಹಿಸಲು ಅನುಮೋದನೆ ನೀಡುವ ಕುರಿತು.**

ಮಂಡಳಿಯ ನೋಂದಾಯಿತ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗೆ ರೂಪಿಸಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಮಾಹಿತಿ ಮತ್ತು ನೋಂದಣಿ ಹೊಂದುವ ಬಗ್ಗೆ ಹೆಚ್ಚಿನ ಪ್ರಚಾರವನ್ನು ಮಂಡಳಿ ವತಿಯಿಂದ ಕಳೆದ 02 ವರ್ಷದಿಂದ ಮಾಡಲಾಗಿರುತ್ತದೆ. ಅಲ್ಲದೆ, ಕೋವಿಡ್ 1 ಮತ್ತು 2ನೇ ಅಲೆ ಸಂದರ್ಭದಲ್ಲಿ ಮಂಡಳಿಯು ನೋಂದಾಯಿತ ಕಾರ್ಮಿಕರಿಗೆ ಒಂದು ಬಾರಿಯ ನಗದು ಪರಿಹಾರವನ್ನು ವಿತರಿಸಿದ್ದು ರಾಜ್ಯಾದ್ಯಂತ ಹೆಚ್ಚಿನ ಜನ ಮನ್ನಣೆಯನ್ನು ಗಳಿಸಿರುತ್ತದೆ.

ಈ ಎಲ್ಲಾ ಕಾರಣಗಳಿಂದ ಮಂಡಳಿಯ ಸೌಲಭ್ಯಗಳನ್ನು ಪಡೆಯಲು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳನ್ನು ಮಾಡಲು ಅನರ್ಹ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿಗಾಗಿ ಅರ್ಜಿ ಸಲ್ಲಿಸುತ್ತಿರುವುದು ಕಂಡು ಬಂದಿರುತ್ತದೆ. ಆದಕಾರಣ ನಕಲಿ ಕಟ್ಟಡ ಕಾರ್ಮಿಕರ ನೋಂದಣಿಯಾಗುವುದನ್ನು ತಡೆಯಲು ವಿಭಾಗವಾರು ಸಹಾಯಕ ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ನೋಂದಣಿ ಬಗ್ಗೆ ಪರಿಶೀಲನೆ ಮಾಡಿ ನಕಲಿ ಎಂದು ಕಂಡು ಬಂದಲ್ಲಿ ಸದರಿಯವರ ನೋಂದಣಿಯನ್ನು ರದ್ದುಪಡಿಸಲು ಮತ್ತು ತಪ್ಪಿತಸ್ಥರ ಮೇಲೆ ದೂರು ದಾಖಲಿಸಿ ಕ್ರಮಕೈಗೊಳ್ಳಲು ಅಧಿಕಾರ ನೀಡುವ ಅವಶ್ಯಕತೆ ಇರುತ್ತದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:** ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ನಕಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿಯನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ ಎಂಬುದರ ಬಗ್ಗೆ ಸಭೆಗೆ ವಿವರಿಸುವಂತೆ ಮಂಡಳಿಯ ಕಾರ್ಯದರ್ಶಿಗಳಿಗೆ ಸೂಚಿಸಿದರು.

ಕಾರ್ಯದರ್ಶಿಗಳು ಮಾತನಾಡುತ್ತಾ, ವಿಭಾಗವಾರು ಸಹಾಯಕ ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಕ್ಯಾಂಪೇನ್‌ಗಳ ಮೂಲಕ ನಕಲಿ ನೋಂದಣಿಯನ್ನು ತಡೆಗಟ್ಟಹಬುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಂಡಳಿಯ ಸದಸ್ಯರಾದ ಶ್ರೀ ನಾಗನಾಥ್ ರವರು ಮಾತನಾಡುತ್ತಾ, ಸಿಎಸ್‌ಸಿ ಸೆಂಟರ್‌ಗಳಲ್ಲಿ ನೋಂದಣಿಯನ್ನು ನಿಲ್ಲಿಸಿ ನೋಂದಾಯಿತ ಕಾರ್ಮಿಕ ಸಂಘಟನೆಗಳಿಗೆ ಮಾತ್ರ ಕಾರ್ಮಿಕರನ್ನು ನೋಂದಾಯಿಸಲು ಅವಕಾಶ ನೀಡಿದರೆ ನಕಲಿ ನೋಂದಣಿಯನ್ನು ತಡೆಗಟ್ಟಬಹುದೆಂದು ಸಭೆಗೆ ತಿಳಿಸಿದರು. ಅದಕ್ಕೆ ಸರ್ಕಾರದ ಕಾರ್ಯದರ್ಶಿಗಳು ಮಾತನಾಡುತ್ತಾ, ಕಾರ್ಮಿಕ ಸಂಘಟನೆಗಳ ಮೇಲೆ ನಂಬಿಕೆಯಿದ್ದು, ಕೆಲವು ಕಡೆ ಕಾರ್ಮಿಕರ ನಕಲಿ ನೋಂದಣಿಯಾಗುತ್ತಿದೆ. ಹಾಗಾಗಿ, ನಕಲಿ ನೋಂದಣಿಯನ್ನು ತಡೆಗಟ್ಟಲು ಅಧಿಕಾರಿಗಳಿಗೆ ಅಧಿಕಾರ ನೀಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ನಕಲಿ ನೋಂದಣಿ ತಡೆಗಟ್ಟುವುದು ಅನಿವಾರ್ಯವಾಗಿದ್ದು, ನಿಯಮಗಳಡಿ ಸೂಕ್ತ ತಿದ್ದುಪಡಿ ತಂದು ಅನರ್ಹ ಕಾರ್ಮಿಕರ ನೋಂದಣಿಯನ್ನು ರದ್ದುಪಡಿಸಲು ಅಧಿಕಾರಿಗಳಿಗೆ ಅಧಿಕಾರ ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಸದರಿ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## ವಿಷಯ ಸಂಖ್ಯೆ-08

**2021-2022 ನೇ ಸಾಲಿನಲ್ಲಿ ಮಂಡಳಿಯು ಭರಿಸಿದ ಖರ್ಚು ವೆಚ್ಚಕ್ಕೆ ಅನುಮೋದನೆ ನೀಡುವ ಕುರಿತು.**

ಮಂಡಳಿಯ 2021-22ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ದಪಡಿಸಲು ಮೆ॥ ಪೂಜರ್ & ಅಸೋಸಿಯೆಟ್ಸ್ ಚಾಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಬೆಂಗಳೂರು ಇವರಿಗೆ ಟೆಂಡರ್ ಮುಖಾಂತರ ದಿನಾಂಕ 22-03-2022 ರಂದು ವಹಿಸಲಾಗಿತ್ತು. ಸದರಿ ಸಂಸ್ಥೆಯವರು ಮೇಲೆ ಹೇಳಿದ ಸಾಲಿನ ಲೆಕ್ಕ ಪತ್ರಗಳನ್ನು ಸಿದ್ದಪಡಿಸಿ ಮಂಡಳಿಗೆ ಜೂನ್-2022 ರ ಮಾಹೆಯಲ್ಲಿ ಸಲ್ಲಿಸಿರುತ್ತಾರೆ. ಸದರಿ ಸಾಲಿನ ಲೆಕ್ಕ ಪತ್ರಗಳ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:** ಈ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ನಂತರ 2021-22ನೇ ಸಾಲಿನಲ್ಲಿ ಮಂಡಳಿಯು ಭರಿಸಿದ ಖರ್ಚು ವೆಚ್ಚಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ವಿಷಯ ಸಂಖ್ಯೆ-09

**2022-23ನೇ ಸಾಲಿನಲ್ಲಿ ಮಂಡಳಿಯ ಆಯವ್ಯಯದಲ್ಲಿ ಅನುಮೋದನೆಗೊಂಡಿರುವ ಮಂಡಳಿಯ ಐಇಸಿ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಕುರಿತು.**

ಮಂಡಳಿಯ ಫಲಾನುಭವಿಗಳ ನೋಂದಣಿ, ನವೀಕರಣ, ಸುಂಕ ಸಂಗ್ರಹಣೆ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು 2022-23ನೇ ಸಾಲಿನಲ್ಲಿ ಈ ಕೆಳಕಂಡ ಐಇಸಿ ಚುಟವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿರುತ್ತದೆ.

ಪೋಸ್ಟರ್ಸ್, ಬ್ರೋಚರ್ಸ್, ಬ್ಯಾನರ್, ಹೋರ್ಡಿಂಗ್ಸ್, ಕಿರುಹೊತ್ತಿಗೆ, ಕ್ಯಾಲೆಂಡರ್ ಮತ್ತು ಲೀಪ್ಲೆಟ್ಸ್/ಪಾಂಪ್ಲೆಟ್ಸ್ ಮುಂತಾದ ಮುದ್ರಣ ಚಟುವಟಿಕೆಗಳು, ಶ್ರಾವ್ಯ ಮಾಧ್ಯಮದ ಮೂಲಕ ಪ್ರಚಾರ, ಆಟೋ ಬ್ರ್ಯಾಂಡಿಂಗ್, ಕಿರುಚಿತ್ರ/ ಸಾಕ್ಷ್ಯಚಿತ್ರಗಳು, ವಾಹನ ಬ್ರ್ಯಾಂಡಿಂಗ್ ಚಟುವಟಿಕೆಗಳು, ರೇಡಿಯೋ ಪ್ರಚಾರ, ಎಲ್.ಇ.ಡಿ ಹೋರ್ಡಿಂಗ್, ಆಟೋಮೇಟೆಡ್ ಕಾಲ್ಸ್, ಆಟೋಮೇಟೆಡ್ ಮೆಸೇಜಸ್ (ವಾಟ್ಸಾಪ್/ಟೆಕ್ಸ್ಟ್), ಟಿನ್‌ಪ್ಲೇಟ್ಸ್/ಸನ್ ಬೋರ್ಡ್/ಬಿಲ್ ಬೋರ್ಡ್ ಮುಂತಾದ ಬೋರ್ಡ್‌ಗಳ ಮುದ್ರಣ, ಬಸ್ ಬ್ರ್ಯಾಂಡಿಂಗ್ ಚಟುವಟಿಕೆ, ಬಸ್ ನಿಲ್ದಾಣ, ರೈಲು ನಿಲ್ದಾಣ ಮುಂತಾದ ಕಡೆಗಳಲ್ಲಿ ಶ್ರಾವ್ಯ ಮಾಧ್ಯಮಗಳ ಮೂಲಕ ಪ್ರಚಾರ, ರೈಲು ಬ್ರ್ಯಾಂಡಿಂಗ್, ರೈಲು ನಿಲ್ದಾಣಗಳಲ್ಲಿ ವೀಡಿಯೋ/ಆಡಿಯೋ ಪ್ರಚಾರ, ಬಸ್ ನಿಲ್ದಾಣ ಬ್ರ್ಯಾಂಡಿಂಗ್ ಮೂಲಕ ಪ್ರಚಾರ, ಎಲ್.ಇ.ಡಿ ವಾಹನ ಬ್ರ್ಯಾಂಡಿಂಗ್ ಚಟುವಟಿಕೆ, ಕಿಯೋಸ್ಕ್‌ನಂತಹ ವಿದ್ಯುನ್ಮಾನ ಇಂಟರಾಕ್ಟೀವ್ ಯಂತ್ರಗಳ ಮೂಲಕ ಪ್ರಚಾರ ಹಾಗೂ ಮಾಹಿತಿ ಬಿತ್ತರಿಕೆ, ಬಸ್ ನಿಲ್ದಾಣ/ರೈಲು ನಿಲ್ದಾಣ ಮುಂತಾದ ಕಡೆಗಳಲ್ಲಿ ಎಲ್.ಇ.ಡಿ ಡಿಸ್ಪ್ಲೇಗಳ ಮೂಲಕ ಪ್ರಚಾರ, ಗೋಡೆ ಬರಹ, ಸಾಮಾಜಿಕ/ಡಿಜಿಟಲ್ ಮಾಧ್ಯಮ ಚಟುವಟಿಕೆಗಳು/ಜಾಹೀರಾತುಗಳು, ಟಿ.ವಿ ಜಾಹೀರಾತು, ದಿನ ಪತ್ರಿಕೆಗಳು, ವಾರ ಪತ್ರಿಕೆಗಳು, ಮಾಸಿಕ ಪತ್ರಿಕೆಗಳು, ವಿಶೇಷ ಸಂಚಿಕೆಗಳು ಮುಂತಾದವುಗಳಲ್ಲಿ ಪ್ರಕಟಣೆ, ಜಾಹೀರಾತು ಮೂಲಕ ಪ್ರಚಾರ, ವೀಡಿಯೋ ಡಿಸ್‌ಪ್ಲೇಗಳ ಅಳವಡಿಕೆ ಮತ್ತು ಜಾಹೀರಾತು, ಹೋರ್ಡಿಂಗ್ ಪ್ಯಾನೆಲ್‌ಗಳ ಅಳವಡಿಕೆ ಮತ್ತು ಜಾಹೀರಾತು, ಬೀದಿ ನಾಟಕ ಮತ್ತು ಆಟೋ ಮುಂತಾದ ವಾಹನಗಳ ಮೂಲಕ ಪ್ರಚಾರ.

ಮೇಲ್ಕಂಡ ರೀತಿಯ ಚಟುವಟಿಕೆಗಳ ಮೂಲಕ ಸಮರ್ಪಕವಾಗಿ ಐಇಸಿ ಚಟುವಟಿಕೆಗಳನ್ನು 2022-23ನೇ ಸಾಲಿನಲ್ಲಿ ಹಮ್ಮಿಕೊಳ್ಳಬಹುದಾಗಿರುತ್ತದೆ.

ಸದರಿ ವಿಷಯವನ್ನು ಮಂಡಳಿಯ ಅವಗಾಹನೆಗೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಬಿಎಂಟಿಸಿ, KSRTC/NWKSRTC/NEKSRTC ಸಂಸ್ಥೆಗಳಿಗೆ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಬಸ್‌ಪಾಸ್ ವಿತರಿಸುವ ಸಲುವಾಗಿ ನೂರಾರು ಕೋಟಿ ಪಾವತಿಸುತ್ತಿದ್ದು, ಇವರು ಮಂಡಳಿಯ ಯೋಜನೆಗಳನ್ನು ಬಸ್‌ಗಳ ಮೇಲೆ ಉಚಿತವಾಗಿ ಜಾಹೀರಾತು ಮಾಡುವುದು ಅಗತ್ಯವಾಗಿರುತ್ತದೆಂದು ತಿಳಿಸಿ ಈ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ಕ್ರಮಕೈಗೊಳ್ಳುವಂತೆ ಹಾಗೂ ಮಂಡಳಿಯ ವತಿಯಿಂದ ಹಲವಾರು ಚಟುವಟಿಕೆಗಳ ಮೂಲಕ ಅನುಷ್ಠಾನಗೊಳಿಸಲು ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

## ವಿಷಯ ಸಂಖ್ಯೆ-10

**ಮಂಡಳಿಯ ವೃಂದ ಮತ್ತು ನೇರ ನೇಮಕಾತಿ ನಿಯಮಗಳಲ್ಲಿ ಅನುಮೋದನೆಗೊಂಡಿರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು Recruitment Agency ಯನ್ನು ಆಯ್ಕೆ ಮಾಡಲು ಮಂಡಳಿಯ ಅನುಮೋದನೆ ಪಡೆಯುವ ಬಗ್ಗೆ.**

ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅನುಮೋದನೆಗೊಂಡಿರುವ ಹುದ್ದೆಗಳಲ್ಲಿ 186 ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಆಯ್ಕೆ ಮಾಡಲು ಪ್ರಕ್ರಿಯೆಯನ್ನು ಕೈಗೊಳ್ಳಲು ದಿನಾಂಕ: 03-02-2022 ರಂದು ನಡೆದ ಮಂಡಳಿಯ 35ನೇ ಸಭೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲು ಸಮ್ಮತಿಸುವ ವಿಶ್ವವಿದ್ಯಾನಿಲಯಗಳ ಮುಖಾಂತರ ಕೈಗೊಳ್ಳಲು ನಿರ್ಣಯಿಸಲಾಗಿದ್ದು, ಹಲವು ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಿಗೆ ಮಂಡಳಿಯಿಂದ ಪತ್ರ ಬರೆಯಲಾಗಿದ್ದು, ಇದರಲ್ಲಿ ಕೇವಲ 2 ಸಂಸ್ಥೆಗಳು ಮಾತ್ರ ಸ್ಪಂದಿಸಿದ್ದು, ಗುಲ್ಬರ್ಗಾ ವಿಶ್ವವಿದ್ಯಾಲಯ ಇವರು ನೇಮಕಾತಿ ಪ್ರಕ್ರೀಯೆಯ ಕೈಗೊಳ್ಳಲು ಒಪ್ಪಿಗೆ ನೀಡಿರುವುದಿಲ್ಲ. ದಾವಣಗೆರೆ ವಿಶ್ವವಿದ್ಯಾಲಯ ಇವರು ನೇಮಕಾತಿ ನಡೆಸಲು ಕೆಲವು ಸ್ಪಷ್ಟನೆ ಕೋರಿ ಬರೆದಿರುವ ಪತ್ರಕ್ಕೆ ಸಂಬಂಧಿಸಿದಂತೆ ದಿನಾಂಕ 20-04-2022 ರಂದು ಸದರಿಯವರಿಂದ ಚರ್ಚಿಸಿ ಮಂಡಳಿಯಿಂದ ಹೆಚ್ಚುವರಿಯಾಗಿ ಮಾಹಿತಿಯನ್ನು ಒದಗಿಸಲಾಗಿರುತ್ತದೆ.

ಈ ವಿಷಯವನ್ನು ಮಂಡಳಿಯ ಅವಗಾಹನೆಗಾಗಿ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಪ್ರಸ್ತುತ ಕಾರ್ಮಿಕ ಇಲಾಖೆಯ ಅಧಿಕಾರಿಗಳು 02 ರಿಂದ 03 ವೃತ್ತಗಳಲ್ಲಿ ಅಧಿಕ ಪ್ರಭಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಕಾರ್ಯಭಾರದ ಒತ್ತಡದಿಂದ ಹೊರಗುತ್ತಿಗೆ ನೌಕರರ ಮೇಲೆ ಅವಲಂಬಿತರಾಗಿರುವುದರಿಂದ, ಡಿಇಒಗಳು ಮಂಡಳಿಯ ಸೌಲಭ್ಯಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಹಾಗಾಗಿ, ಮಂಡಳಿಯು ಸಿಬ್ಬಂದಿ ನೇಮಕಮಾಡುವುದು ಅಗತ್ಯವಾಗಿರುತ್ತದೆ ಎಂದು ತಿಳಿಸುತ್ತಾ, ಮಂಡಳಿಯ ವೃಂದ ಮತ್ತು ನೇರ ನೇಮಕಾತಿ ನಿಯಮಗಳಲ್ಲಿ ಅನುಮೋದನೆಗೊಂಡಿರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು Recruitment Agency ಯ ಬದಲಾಗಿ ಕೆಪಿಎಸ್‌ಸಿ ಅಥವಾ ಕೆಇಎ ಅಥವಾ ವಿಶ್ವ ವಿದ್ಯಾನಿಲಯಗಳ ಮುಖಾಂತರ ಎಂಬುದರ ಬಗ್ಗೆ ಅಧಿಕಾರಿಗಳ ಸಭೆ ಕರೆದು ತೀರ್ಮಾನಿಸಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು.**

## ವಿಷಯ ಸಂಖ್ಯೆ-11

**Preventive Health Care ಯೋಜನೆಗಳ ಅನುಷ್ಠಾನಗೊಳಿಸಲು ಸಂಸ್ಥೆಗಳಿಗೆ ಕಾರ್ಯಾದೇಶ ನೀಡಿದ ಬಗ್ಗೆ ಹಾಗೂ ಮುಂಗಡ ಅನುದಾನ ಬಿಡುಗಡೆ ಮಾಡಿರುವುದರ ಕುರಿತು ಅನುಮೋದನೆ ಪಡೆಯುವ ಬಗ್ಗೆ.**

ಮಂಡಳಿಯ ನೋಂದಾಯಿತ ಫಲಾನುಭವಿಗಳು ಮತ್ತು ಅವರ ಅವಲಂಭಿತರು ಕೋವಿಡ್ ಸಂದರ್ಭದಲ್ಲಿ ಎದುರಿಸಿದ ಕೋವಿಡ್ ಸಂಕಷ್ಟಗಳನ್ನು ಮನಗಂಡು ಅವರ ಆರೋಗ್ಯವನ್ನು ಕಾಪಾಡಲು

ಕಾಲಕಾಲಕ್ಕೆ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವ ಮೂಲಕ ಆರೋಗ್ಯ ತಪಾಸಣೆಯನ್ನು ನಡೆಸಲು ಉದ್ದೇಶಿಸಿ ಮಂಡಳಿಯ Preventive Health Care ಯೋಜನೆಯನ್ನು ರೂಪಿಸಿರುತ್ತದೆ.

ಅದರಂತೆ ಉಪವಿಭಾಗವಾರು ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಕೆಟಿಪಿಪಿ ಕಾಯ್ದೆ 1999 ರ ಕಲಂ 4(ಎ) ರಡಿ ವಿನಾಯತಿ ಪಡೆದು ಅದರಂತೆ ಸ್ಪರ್ದಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಿ ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಮೊದಲ ಹಂತದಲ್ಲಿ ಒಟ್ಟು 30 ಕಾರ್ಮಿಕ ಅಧಿಕಾರಿಗಳ ವ್ಯಾಪ್ತಿಯಲ್ಲಿ ಒಟ್ಟು 9.32 ಲಕ್ಷ ನೋಂದಾಯಿತ ಫಲಾನುಭವಿಗಳು ಮತ್ತು ಅವರ ಅವಲಂಭಿತರಿಗೆ ವಿವಿಧ 20 ರೀತಿಯ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲು ಒಟ್ಟು 30 ಸಂಸ್ಥೆಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಇದುವರೆಗೂ 4.09 ಲಕ್ಷ ಫಲಾನುಭವಿಗಳಿಗೆ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿರುತ್ತಾರೆ.

ಈ ಸಂಸ್ಥೆಗಳು ಸದರಿ ಯೋಜನೆಯನ್ನು ಪ್ರಾರಂಭಿಸಲು ಅಗತ್ಯ ಪೂರ್ವ ತಯಾರಿ ಮತ್ತು ಐಇಸಿ ಚಟುವಟಿಕೆಗಳನ್ನು ಕೈಗೊಂಡು ಮುಂಗಡವಾಗಿ ಶೇ.50 ರಷ್ಟು ಮೊತ್ತವನ್ನು ಬಿಡುಗಡೆ ಮಾಡಲು ಕೋರಿಕೆಗಳನ್ನು ಸಲ್ಲಿಸಿರುತ್ತಾರೆ. ಸದರಿಯವರ ಕೋರಿಕೆಯನ್ವಯ ಕಡತವನ್ನು ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿ ಅನುಮೋದನೆ ಪಡೆದು ಮುಂಗಡ ಹಣ ಬಿಡುಗಡೆ ಮಾಡಲಾಗಿರುತ್ತದೆ. ಹಾಗಾಗೀ ಈ ವಿಷಯವನ್ನು ಸಭೆಗೆ ಮಂಡಿಸುತ್ತಾ ಘಟನೋತ್ತರ ಅನುಮೋದನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, Preventive Health Care ಯೋಜನೆಯ ಅನುಷ್ಠಾನ ಮಾಡುತ್ತಿರುವ ಸಂಸ್ಥೆಗಳು ಕಾರ್ಮಿಕರಿಗೆ ವೈದ್ಯಕೀಯ ತಪಾಸಣೆಯ ವರದಿಗಳನ್ನು ಕಡ್ಡಾಯವಾಗಿ ನೀಡಬೇಕೆಂದು ಈ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸಬೇಕೆಂದು ನಿರ್ದೇಶಿಸಲು ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಸೂಚಿಸಿದರು ಹಾಗೂ ಸದರಿ ತಪಾಸಣಾ ಕಾರ್ಯ ಕೈಗೊಂಡಿರುವ ಸಂಸ್ಥೆಗಳಿಗೆ ಈಗಾಗಲೇ ಕಾರ್ಯಾದೇಶದ ಮೊತ್ತದ ಶೇ.50ರಷ್ಟು ಮೊತ್ತವನ್ನು ಮುಂಗಡವಾಗಿ ಬಿಡುಗಡೆ ಮಾಡಿರುವುದಕ್ಕೆ ಘಟನ್ನೋತ್ತರ ಮಂಜೂರಾತಿಯನ್ನು ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು. ಅಲ್ಲದೆ, ಚಾಮರಾಜನಗರದಲ್ಲಿ ಈ ಬಗ್ಗೆ ದೂರು ಸ್ವೀಕೃತವಾಗಿದ್ದು ಸದರಿ ಜಿಲ್ಲೆಯಲ್ಲಿ ಸಹಾಯಕ ಕಾರ್ಮಿಕ ಆಯುಕ್ತರು ಖುದ್ದು ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲು ಹಾಗೂ ಸಮರ್ಪಕವಾಗಿ ವೈದ್ಯಕೀಯ ತಪಾಸಣೆ ನಡೆಸಲು ಕ್ರಮಕೈಗೊಳ್ಳಲು ಸೂಚಿಸಿದರು.**

## ವಿಷಯ ಸಂಖ್ಯೆ-12

**2021-22ನೇ ಸಾಲಿನಲ್ಲಿ ಮಂಡಳಿಯ ಆಯವ್ಯಯದಲ್ಲಿ ಅನುಮೋದನೆಗೊಂಡಿರುವ 100 ಶಿಶುಪಾಲನಾ ಕೇಂದ್ರಗಳು ಮತ್ತು 2022-23ನೇ ಸಾಲಿನ ಆಯವ್ಯಯದಲ್ಲಿ ಅನುಮೋದನೆಗೊಂಡಿರುವ 100 Mobile Medical Unit ಗಳನ್ನು ಪ್ರಾರಂಭಿಸಲು ಸ್ಥಳ ಆಯ್ಕೆ ಮಾಡಲು ಅನುಮೋದನೆ ಪಡೆಯುವ ಬಗ್ಗೆ**

2021-22 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು 100 ಹೆಚ್ಚುವರಿ ಶಿಶುಪಾಲನಾ ಕೇಂದ್ರಗಳನ್ನು ರಾಜ್ಯಾದ್ಯಂತ ತೆರೆಯಲು ಘೋಷಣೆ ಮಾಡಿರುತ್ತಾರೆ. ಸದರಿಯವರ ಘೋಷಣೆಯಂತೆ ಪ್ರಾದೇಶಿಕವಾರು ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು

ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಇ-ಟೆಂಡರ್ ಮೂಲಕ ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡಿ ಕಾರ್ಯಾದೇಶಗಳನ್ನು ನೀಡಲಾಗಿರುತ್ತದೆ. ಸದರಿ ಸಂಸ್ಥೆಯವರು ಕ್ಷೇತ್ರ ಮಟ್ಟದಲ್ಲಿ ಸರ್ವೆ ಕಾರ್ಯವನ್ನು ಕೈಗೊಂಡು ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಬಹುದಾದ ಸ್ಥಳಗಳನ್ನು ಗುರುತಿಸಿ ವರದಿಗಳನ್ನು ನೀಡುವ ಕಾರ್ಯಪ್ರಗತಿಯಲ್ಲಿರುತ್ತದೆ. ಈ ಕೇಂದ್ರಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ತೆರೆಯಲು ಕ್ರಮಕೈಗೊಳ್ಳಬಹುದಾಗಿರುತ್ತದೆ.

ಅದೇ ರೀತಿ 2022-23ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಟ್ಟು 100 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ತೆರೆಯಲಾಗುವುದೆಂದು ಘೋಷಣೆ ಮಾಡಿರುತ್ತಾರೆ. ಈ ಕೇಂದ್ರಗಳನ್ನು ಜಿಲ್ಲಾವಾರು ಹಂಚಿಕೆ ಮಾಡಿ ಅರ್ಹ ಸಂಸ್ಥೆಯ ಆಯ್ಕೆಗಾಗಿ ಇ-ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಈಗಾಗಲೇ ಸರ್ಕಾರವನ್ನು ಕೋರಲಾಗಿರುತ್ತದೆ. ಈ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸಹ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ತೆರೆಯಲು ಕ್ರಮಕೈಗೊಳ್ಳಬಹುದಾಗಿರುತ್ತದೆ.

ಸದರಿ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರು ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯಕ್ರಮಗಳ ಬಗ್ಗೆ ಬಹಳ ಎಚ್ಚರಿಕೆಯಿಂದ ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುವಂತೆ ತಿಳಿಸಿದರು ಹಾಗೂ 100 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಕಾರ್ಮಿಕ ಉಪವಿಭಾಗವಾರು ಹಂಚಿಕೆ ಮಾಡಿ ಸ್ಥಾಪಿಸುವಂತೆ ತಿಳಿಸಿದರು. ಸದರಿ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-13

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರವನ್ನು ಅವರ ಅವಲಂಬಿತರಿಗೆ ಈಗಾಗಲೇ ಬಿಡುಗಡೆ ಮಾಡಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ ಹಾಗೂ ನೋಂದಾಯಿತರಲ್ಲದ 16 ಕಟ್ಟಡ ಕಾರ್ಮಿಕರು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಮೃತ ಪಟ್ಟಿದ್ದು, ಇವರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರವನ್ನು ವಿತರಿಸಲು ಅನುಮೋದನೆ ನೀಡುವ ಬಗ್ಗೆ.**

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯು ಅನುಮೋದನೆ ನೀಡಿರುತ್ತಾರೆ. ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ರೂ.2,00,000/- ಗಳನ್ನು ಬಿಡುಗಡೆ ಮಾಡಿದ್ದು, ಈ ಕಳಕಂಡಂತೆ ಅರ್ಜಿಗಳಿಗೆ ಘಟನೋತ್ತರ ಅನುಮೋದನೆ ನೀಡಲು ಮಂಡಿಸಿದೆ.

| ಕ್ರ. ಸಂ | ತನಿಖಾ ವರದಿ ಸಲ್ಲಿಸಿದ ಅಧಿಕಾರಿ | ಕಡತ ಸಂಖ್ಯೆ | ವಿಷಯ | ಮೃತಪಟ್ಟ ನೋಂದಾಯಿತರಲ್ಲದ ಕಟ್ಟಡಕಾರ್ಮಿಕರ ಹೆಸರು | ಮಂಡಳಿಯಿಂದ ತೆಗೆದುಕೊಂಡಕ್ರಮ |
|---|---|---|---|---|---|
| 1 | ಕಾರ್ಮಿಕ ನಿರೀಕ್ಷಕರು, ಕುಮಟಾ | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ | ದಿನಾಂಕ:09-11-2021 ರಂದು ಹಿಟಾಚಿ ಮೂಲಕ ಗುಡ್ಡದ ಮಣ್ಣನ್ನು ಕೊರೆದು ತೆಗೆದು ಮಣ್ಣನ್ನು ಟಿಪ್ಪರ್ ಲಾರಿ ಮೂಲಕ | ಶ್ರೀ ಮೋಹನದಾಸ ಹಮ್ಮಣ ನಾಯಕ | ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ |

| | | | | | |
|---|---|---|---|---|---|
| | ವೃತ್ತ, ಕುಮಟಾ | ~-18/2021-22 | ಗಂಗಾವತಿಯಲ್ಲಿ ಬ್ರಿಡ್ಜ್ ಕಟ್ಟಲು ನದಿಗೆ ಮಣ್ಣನ್ನು ಹಾಕಲು ತೆಗೆದುಕೊಂಡು ಹೋಗುತ್ತಿದ್ದು, ಹಿಟಾಚಿಯನ್ನು ಬಳಸಿ ಗುಡ್ಡದ ಮಣ್ಣನ್ನು ಕೊರೆಯುತ್ತಿದ್ದಾಗ ಮಣ್ಣಿನ ಗುಡ್ಡ ಕುಸಿದು ಗುಡ್ಡದ ಪಕ್ಕದಲ್ಲಿ ನಿಂತಿದ್ದ ಮೋಹನದಾಸ ಹಮ್ಮಣ ನಾಯಕ, ಶೀಳ್ಯ, ಬಾಸಗೋಡ, ಅಂಕೋಲಾ, ಉತ್ತರ ಕನ್ನಡ ಜಿಲ್ಲೆ ಇವರು ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ. | (ಉತ್ತರ ಕನ್ನಡ ಜಿಲ್ಲೆ) | ಚೆಕ್ ಸಂಖ್ಯೆ: 746179 ದಿನಾಂಕ:25-04-2022 ರೂ.2,00,000/-ಗಳನ್ನು ಮಂಡಳಿಯಿಂದ ಬಿಡುಗಡೆ ಮಾಡಲಾಗಿದೆ. |

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯ ಅಧ್ಯಕ್ಷರು ಹಾಗೂ ಮಾನ್ಯ ಕಾರ್ಮಿಕ ಸಚಿವರು ಸದರಿ ಪ್ರಕರಣಗಳಿಗೆ ಅನುಮೋದನೆ ನೀಡಿರುತ್ತಾರೆ. ಪ್ರಸ್ತುತ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಕೋರಿ ಸುಮಾರು 16 ಅರ್ಜಿಗಳು ಸ್ವೀಕೃತಗೊಂಡಿದ್ದು ಅರ್ಜಿಗಳ ವಿವರ ಈ ಕೆಳಕಂಡಂತಿರುತ್ತದೆ.

## <u>ನೋಂದಾಯಿತ ಕಟ್ಟಡ ಕಾರ್ಮಿಕರ ಅಪಘಾತ ಪ್ರಕರಣಗಳ ಪಟ್ಟಿ ಅನುಮೋದನೆಗಾಗಿ</u>

| ಕ್ರ. ಸಂ | ತನಿಖಾ ವರದಿ ಸಲ್ಲಿಸಿದ ಅಧಿಕಾರಿ | ಕಡತ ಸಂಖ್ಯೆ | ವಿಷಯ | ಮೃತಪಟ್ಟ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಹೆಸರು |
|---|---|---|---|---|
| 1 | ಸಹಾಯಕ ಕಾರ್ಮಿಕ ಆಯುಕ್ತರು, ವಿಬಾಗ-2 ಬೆಂಗಳುರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-15/2021-22 | ದಿನಾಂಕ:16-02-2021ರಂದು ಶ್ರೀ ಮುನಿಯಪ್ಪ ಬಿನ್ ಲೇಟ್ ಮೇಲೂರಪ್ಪ ರವರ ಮಾಲಿಕತ್ವದ ಕೋಳಿ ಶೆಡ್‌ನ ಗೋಡೆಯನ್ನು ನಿರ್ಮಿಸುತ್ತಿದಾಗ ಆಕಸ್ಮಿಕವಾಗಿ ಗೋಡೆಯು ಶ್ರೀ ಜೆ.ಬಿ ಮುನಿನಾರಾಯಣಪ್ಪ ರವರ ಮೇಲೆ ಕುಸಿದು ಬಿದ್ದು ತಲೆಯ ಭಾಗಕ್ಕೆ ತೀವ್ರ ಪೆಟ್ಟಾಗಿ ಮೃತಪಟ್ಟಿರುತ್ತಾರೆ. | ಜೆ.ಬಿ ಮುನಿನಾರಾಯಣಪ್ಪ (ಬೆಂಗಳೂರು ಗ್ರಾಮಾಂತರ ಜಿಲ್ಲೆ) |
| 2 | ಕಾರ್ಮಿಕ ಅಧಿಕಾರಿ ಮಡಿಕೇರಿ, ಕೊಡಗು ಜಿಲ್ಲೆ | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-16/2021-22 | ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಚೇರಂಬಾಣೆ, ಕೋಳಗದಾಳು ಗ್ರಾಮದಲ್ಲಿರುವ ಸಿದ್ಧರೂಢ ಮಠಕ್ಕೆ ಒತ್ತಾದಂತೆ ಸಾರ್ವಜನಿಕ ರಸ್ತೆಯಲ್ಲಿ ಬರೆ ಜರಿದಿದ್ದು, ಇದಕ್ಕೆ ಸರ್ಕಾರದ ವತಿಯಿಂದ ತಡೆಗೋಡೆ ಕೆಲಸವನ್ನು ಮಾಡಿಸುತ್ತಿದ್ದ ಸಂದರ್ಭದಲ್ಲಿ ಕಾಂಕ್ರಿಟ್ ಮಿಕ್ಸರ್ ತುಂಬಿದ್ದ ಲಾರಿಯನ್ನು ರಸ್ತೆಯಲ್ಲಿ ನಿಲ್ಲಿಸಿ, ತಡೆಗೋಡೆಯ ಪಕ್ಕಕ್ಕೆ ಹಿಮ್ಮುಖವಾಗಿ ಚಲಾಯಿಸಿದಾಗ ಲಾರಿಯು ತಡೆಗೋಡೆಯ ಬರೆ ಸಮೇತ ತಳಭಾಗದಲ್ಲಿ ಕೆಲಸ ಮಾಡುತ್ತಿದ್ದ ಕಟ್ಟಡ ಕಾರ್ಮಿಕರ ಮೇಲೆ ಉರುಳಿ ಬಿದ್ದಿರುತ್ತದೆ. ಆ ಸಮಯದಲ್ಲಿ ಕಾರ್ಮಿಕರಾದ ಸಂತೋಷ್ ಭಂಡಾರಿ ಮತ್ತು ಪ್ರವೀಣ್ ಮಾವಿನಕಾಯಿ ಇವರು ಸಿಲುಕಿ ಮೃತಪಟ್ಟಿರುತ್ತಾರೆ. | 1. ಸಂತೋಷ್ ಭಂಡಾರಿ<br>2. ಪ್ರವೀಣ್ ಮಾವಿನಕಾಯಿ |

| | | | | |
|---|---|---|---|---|
| **3** | **ಸಹಾಯಕ ಕಾರ್ಮಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ** | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-17/2021-22 | ಯರಗಟ್ಟಿಯಲ್ಲಿ ಹೊಸದಾಗಿ ಕಟ್ಟುತ್ತಿರುವ ಮನೆಯ ಮೇಲೆ ಸ್ಲ್ಯಾಬ್ ಹಾಕುವ ಸಲುವಾಗಿ ಸೆಂಟ್ರಿಂಗ್ ಕೂಲಿ ಕೆಲಸ ಮಾಡುತ್ತಿದ್ದಾಗ ಕಬ್ಬಿಣದ ಸಳಿ ಆಕಸ್ಮಿಕವಾಗಿ ಕೆ.ಇ.ಬಿ ಮೇನ್‌ಲೈನ್ ವೈರಕ್ಕೆ ತಾಗಿ ವಿದ್ಯುತ್ ಶಾಕ್ ತಗುಲಿ ಮರಣ ಹೊಂದಿರುತ್ತಾರೆ. | ರವಿ ಲಕ್ಷ್ಮಣ ಕಿಲಾರಿ |
| **4** | **ಕಾರ್ಮಿಕ ನಿರೀಕ್ಷಕರು ಗೋಕಾಕ ವೃತ್ತ, ಗೋಕಾಕ** | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-19/2021-22 | ದಿನಾಂಕ:22-10-2021 ರಂದು ಗೋಕಾಕ ಜ್ಯೂನಿಯರ್ ಕಾಲೇಜಿನ ಹೊಸ ಬಿಲ್ಡಿಂಗ್ ಎರಡನೇ ಅಂತಸ್ಥಿನ ಕಿಡಕಿ ಹಿಡಿದುಕೊಂಡು ಬಣ್ಣ ಹಚ್ಚುತ್ತಿರುವಾಗ ಆಕಸ್ಮಾತಾಗಿ ಕಾಲು ಜಾರಿ ಕೆಳಗೆ ಬಿದ್ದು ಬಲಗೈಗೆ ತಲೆಗೆ ಬಾರೀ ಗಾಯ ಆಗಿ ಕಿವಿ ಮೂಗು ಬಾಯಿಂದ ರಕ್ತ ಬಂದು ಮೃತಪಟ್ಟಿರುತ್ತಾರೆ. | ಶ್ರೀ ಅನಂದ ಸತ್ತಪ್ಪ ನಾಯ್ಕ (ಬೆಳಗಾವಿ) |
| 5 | ಕಾರ್ಮಿಕ ನಿರೀಕ್ಷಕರು ಗುಂಡ್ಲುಪೇಟೆ ವೃತ್ತ ಗುಂಡ್ಲಪೇಟೆ | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-21/2021-22 | ಗುಂಡ್ಲುಪೇಟೆ ತಾಲ್ಲೂಕು ಮಡಹಳ್ಳಿ ಗ್ರಾಮದ ಹತ್ತಿರ ಇರುವ ಸರ್ವೆ ನಂಬರ್ 192 ರ ಸರ್ಕಾರಿ ಗೋಮಾಳ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಗುತ್ತಿಗೆಯನ್ನು ಪಡೆದು ಕಲ್ಲು ಗಣಿಗಾರಿಕೆ ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಕಲ್ಲು ಗುಡ್ಡ ಹಾಗೂ ಮಣ್ಣು ಕುಸಿದು ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರುಗಳ ಮೇಲೆ ಬಿದ್ದು ಸದರಿ ಕಾರ್ಮಿಕರು ಕಲ್ಲು ಬಂಡೆಗಳ ನಡುವೆ ಸಿಕ್ಕಿಕೊಂಡು ಮರಣ ಹೊಂದಿರುತ್ತಾರೆ. | 1. ಬಬ್ಲು ಉರ್ಫ್ ಅಜಿಮುಲ್ಲಾಖಾನ್ (ಉತ್ತರ ಪ್ರದೇಶ)<br>2. ಸರ್ಫರಾಜ್ ಅನ್ಸಾರಿ ಬಿನ್ ಮುರ್ನ್‌ತಾಜ್ (ಉತ್ತರ ಪ್ರದೇಶ),<br>3. ಮೀರಾಜುದ್ದೀನ್ ಬಿನ್ ಕಮಲುದ್ದೀನ್ (ಉತ್ತರ ಪ್ರದೇಶ), |
| **6** | **ಕಾರ್ಮಿಕ ಅದಿಕಾರಿ ಹಾಸನ** | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-22/2021-22 | ದಿನಾಂಕ:15-02-2022 ರಂದು ಹೊಳೇನರಸೀಪುರ ಶ್ರೀರಾಮದೇವರ ಕಟ್ಟೆ ಹತ್ತಿರ ಹೇಮಾವತಿ ನದಿಗೆ ಎಸ್ ಎನ್ ಸಿ ಕಂಪನಿಯವರು ನಿರ್ಮಿಸುತ್ತಿರುವ ಅಣೆಕಟ್ಟು ಕಾಮಗಾರಿ ಕೆಲಸಕ್ಕೆ ಹೋಗಿದ್ದು ಅಣೆಕಟ್ಟು ಕೆಲಸ ಮಾಡುತ್ತಿರುವಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಶ್ರೀ ಕೆ.ಹೆಚ್ ಮಂಜೇಗೌಡ ಇವರು ಮೃತಪಟ್ಟಿರುತ್ತಾರೆ. | ಶ್ರೀ ಕೆ.ಹೆಚ್ ಮಂಜೇಗೌಡ (ಹಾಸನ) |
| **7** | **ಕಾರ್ಮಿಕ ಅದಿಕಾರಿ ಹಾವೇರಿ** | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-23/2021-22 | ದಿನಾಂಕ:16-03-2022 ರಂದು ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ಶ್ರೀ ಭುವಲ್ ಯಾದವ್ VINP Distillaries and Sugars Pvt Ltd ಕೋಣನಕೆರೆ, ಹಾವೇರಿ ಇವರು ಕೆಲಸದ ಸಂದರ್ಭದಲ್ಲಿ ತೀವ್ರ ಹೃದಯಾಘಾತವಾಗಿ ಮರಣ ಹೊಂದಿರುತ್ತಾರೆ. | ಶ್ರೀ ಭುವಲ್ ಯಾದವ್ (ಬಿಹಾರ್) |
| **8** | ಕಾರ್ಮಿಕ ನಿರೀಕ್ಷಕರು ಜಗಳೂರು ವೃತ್ತ ಜಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-24/2021-22 | ದಿನಾಂಕ:26-03-2021 ರಂದು ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಬಿದರಕೆರೆ ಗೊಲ್ಲರಹಟ್ಟಿ ಗ್ರಾಮದ ಶ್ರೀ ದುರ್ಗಾಂಭ ದೇವಸ್ಥಾನಕ್ಕೆ ಮತ್ತು ಗೋಪುರಕ್ಕೆ ಬಣ್ಣ ಬಳಿಯುವಾಗ ಸಿ.ಸುನೀಲ್ ಕುಮಾರ್ ಇವರು ದೇವಸ್ಥಾನದ ಗೋಪುರದ ಮೇಲಿಂದ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿರುತ್ತಾರೆ. | ಸಿ. ಸುನೀಲ್ ಕುಮಾರ್ (ಶಿವಮೊಗ್ಗ) |

| | | | | |
|---|---|---|---|---|
| 9 | ಕಾರ್ಮಿಕ ನಿರೀಕ್ಷಕರು 3ನೇ ವೃತ್ತ ಹುಬ್ಬಳ್ಳಿ | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-01/2022-23 | ದಿನಾಂಕ:11-11-2021 ರಂದು ಭರಮಾ ಪರಶುರಾಮ ಗೋಮಾಂಚೆ ಇವರು ವಿಜಯ್ ಅಪಾರ್ಟ್‌ಮೆಂಟ್‌ನ 4ನೇ ಮಹಡಿಯಲ್ಲಿ ಸೆಂಟ್ರಿಂಗ್ ಪ್ಲೇಟ್‌ಗಳನ್ನು ತೆಗೆಯುತ್ತಿರುವಾಗ ಒಮ್ಮೆಲೆ ಅಲ್ಲಿಂದ ಕೆಳಗೆ 3ನೇ ಮಹಡಿಯ ಮೇಲೆ ಬಿದ್ದು ಮೃತಪಟ್ಟಿರುತ್ತಾರೆ. | ಭರಮಾ ಪರಶುರಾಮ ಗೋಮಾಂಚೆ (ಬೆಳಗಾವಿ) |
| 10 | ಕಾರ್ಮಿಕ ಅಧಿಕಾರಿ ಉಪ ವಿಭಾಗ-1 ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-02/2022-23 | ದಿನಾಂಕ:31-12-2020 ರಂದು ಚಿಕ್ಕಮರಿಯಪ್ಪ ಇವರು ಟ್ರ್ಯಾಲಿ ಮೇಲೆ ಕುಳಿತು ಎಲೆಕ್ಟ್ರಿಕಲ್ ಕೆಲಸ ಮಾಡುವ ವೇಳೆ ಟ್ರ್ಯಾಲಿ ಸಮೇತ ಕೆಳಗೆ ಬಿದ್ದು ಮೃತಪಟ್ಟಿರುತ್ತಾರೆ. | ಚಿಕ್ಕಮರಿಯಪ್ಪ (ಬೆಂಗಳೂರು) |
| 11 | ಕಾರ್ಮಿಕ ಅಧಿಕಾರಿ ಉಪ ವಿಭಾಗ-1 ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-03/2022-23 | ದಿನಾಂಕ:09-12-2021 ರಂದು ಶ್ರೀ ಮಲ್ಲಪ್ಪ ಇವರು ಚನ್ನೇನಹಳ್ಳಿಯ ಆರ್ಚ್ ಬಳಿಯ ಹತ್ತಿರದ ಕಲ್ಯಾಣ ಮಂಟಪದ ಕಟ್ಟಡ ಕಾಮಗಾರಿ ಮಾಡುವ ವೇಳೆ ಲಿಫ್ಟ್ ತಾಂತ್ರಿಕ ದೋಷದಿಂದ 4ನೇ ಮಹಡಿಯಿಂದ ಕೆಳಗೆ ಬಿದ್ದು ಮೃತಪಟ್ಟಿರುತ್ತಾರೆ. | ಮಲ್ಲಪ್ಪ (ಯಾದಗಿರಿ) |
| 12 | ಕಾರ್ಮಿಕ ಅಧಿಕಾರಿ ಉಪ ವಿಭಾಗ-1 ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-04/2022-23 | ದಿನಾಂಕ:28-03-2022 ರಂದು ಶ್ರೀ ಸಾಬಣ್ಣ ಇವರು 2ನೇ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದಾಗ ಕಾಲು ಜಾರಿ ಕೆಳಗೆ ಬಿದ್ದು ಮೃತಪಟ್ಟಿರುತ್ತಾರೆ. | ಸಾಬಣ್ಣ (ರಾಯಚೂರು) |
| 13 | ಕಾರ್ಮಿಕ ನಿರೀಕ್ಷಕರು, ಮಾನ್ವಿ ವೃತ್ತ, ಮಾನ್ವಿ | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-05/2022-23 | ದಿನಾಂಕ:27-05-2022 ರಂದು ಬಾಹುದ್ದೀನ್ ಇವರು ಸಿರವಾರ ಬಸ್ ನಿಲ್ದಾಣ ಕಟ್ಟಡದ ತೆರವು ಕಾರ್ಯದಲ್ಲಿ ತೊಡಗಿ ಸುತ್ತಿಗೆಯಿಂದ ಕಲ್ಲು ರಾಡುಗಳನ್ನು ತೆಗೆಯುತ್ತಿದ್ದಾಗ ಬಸ್ ನಿಲ್ದಾಣದ ಕಟ್ಟಡದ ಮುಂದಿನ ಛತ್ತಿನ ಚಾವಣಿಯು ಮೃತನ ಕಾಲಿನ ಮೇಲೆ, ಮರ್ಮಾಂಗದ ಮೇಲೆಬಿದ್ದು ಬಾರಿಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. | ಬಾಹುದ್ದೀನ್ (ರಾಯಚೂರು) |

ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಈಗಾಗಲೇ ಕಟ್ಟಡ ಕಾಮಗಾರಿ ಸ್ಥಳದಲ್ಲಿ ಅಪಘಾತ ಸಂಭವಿಸಿ ಮರಣ ಹೊಂದಿದ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಿಗೆ ಮಂಡಳಿ ಸಭೆಯ ಅನುಮೋದನೊಂದಿಗೆ ಮಾನವೀಯತೆಯ ಹಿತದೃಷ್ಠಿಯಿಂದ ರೂ.2.00 ಲಕ್ಷಗಳನ್ನು ಮರಣ ಹೊಂದಿದ ಕಾರ್ಮಿಕರ ಕುಟುಂಬಕ್ಕೆ ನೀಡಲಾಗುತಿದೆಂದು ತಿಳಿಸಿದರು. ಈ ಪ್ರಕರಣಗಳನ್ನು ವಿಶೇಷ ಪ್ರಕರಣಗಳೆಂದು ಪರಿಗಣಿಸಿ ಸದರಿ ವಿಷಯಕ್ಕೆ ಸಭೆಯು ಘಟನ್ಗೋತ್ತರ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ-14**

**ಮಂಡಳಿಯಿಂದ ಇ-ಟೆಂಡರ್ ಕರೆದು ವಿವಿಧ ಯೋಜನೆಗಳ Tender Committee Meeting Proceedings ಗಳನ್ನು ಮಂಡಳಿಯಲ್ಲಿ ಮಂಡಿಸಿ, ಅನುಮೋದನೆ ಪಡೆಯುವ ಬಗ್ಗೆ.**

2020-21ನೇ ಮತ್ತು 2021-22ನೇ ಸಾಲಿನಲ್ಲಿ ಹಲವಾರು ಟೂಲ್‌ಕಿಟ್‌ಗಳು, ಮೊಬೈಲ್ ಕ್ಲಿನಿಕ್‌ಗಳು, ಶಿಶುಪಾಲನ ಕೇಂದ್ರಗಳು ಮತ್ತು ವಸತಿ ಸಮುಚ್ಚಯ (Transit Accommodation)

ಗಳ ಕಾಮಗಾರಿಗಳನ್ನು ಇ-ಟೆಂಡರ್ ಮೂಲಕ ಕೈಗೊಳ್ಳಲಾಗುತ್ತಿದೆ. ಇವುಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡ್ ಸಭೆಗಳನ್ನು ನಡೆಸಲಾಗುತ್ತಿದೆ ಹಾಗೂ ನಡವಳಿಗಳನ್ನು ಅನುಮೋದಿಸಲಾಗುತ್ತಿದೆ. ಸದರಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡ್ ಸಭೆಗಳ ನಡವಳಿಗಳಿಗೆ ಮಂಡಳಿಯಿಂದಲೂ ಅನುಮೋದನೆ ನೀಡಲು ಮಂಡಿಸಿದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-15

**ಮಂಡಳಿಯಲ್ಲಿ ಖಾಲಿ ಇರುವ ಲೀಗಲ್ ಆಫಿಸರ್ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಕುರಿತು**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಬಂಧಿಸಿದ ಹಲವಾರು ವಿಷಯಗಳಲ್ಲಿ ನ್ಯಾಯಬದ್ಧ ತೀರ್ಮಾನ ತೆಗೆದುಕೊಳ್ಳಲು ಕಾನೂನು ಅಭಿಪ್ರಾಯ ತುಂಬ ಮುಖ್ಯವಾಗಿರುತ್ತದೆ. ಮಂಡಳಿಯ ಲೀಗಲ್ ಆಫಿಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದವರು ರಾಜೀನಾಮೆ ನೀಡಿರುತ್ತಾರೆ. ಪ್ರಸ್ತುತ ಈ ಹುದ್ದೆ ಖಾಲಿ ಇರುತ್ತದೆ. ಆದ್ದರಿಂದ ಇವರ ಬದಲಿಗೆ ನೇರ ಗುತ್ತಿಗೆ ಆದಾರದ ಮೇಲೆ ಈಗಾಗಲೇ ಕಾನೂನು ಅಧಿಕಾರಿಗೆ ನಿಗಧಿ ಪಡಿಸಿರುವ ಸೇವಾ ಷರತ್ತುಗಳಿಗೆ ಅನುಗುಣವಾಗಿ ಕಾನೂನು ಅಧಿಕಾರಿಯನ್ನು ನೇಮಿಸಲು ಮಂಡಳಿಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ: ಈ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು ಮಾತನಾಡುತ್ತಾ, ಅನುಭವಿ ವಕೀಲರನ್ನು ನೇರ ಗುತ್ತಿಗೆ ಆಧಾರ ಮೇಲೆ ನೇಮಿಸಿಕೊಳ್ಳುವಂತೆ ತಿಳಿಸಿದರು. ನಂತರ ಸದರಿ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-16

**ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಗೃಹ ಭಾಗ್ಯ ಸೌಲಭ್ಯದಡಿ ವಸತಿ ಸೌಲಭ್ಯ ನೀಡಲು ಸಲ್ಲಿಸಿರುವ ವಿವಿಧ ಸಂಸ್ಥೆ / ಇಲಾಖೆಗಳ ಪ್ರಸ್ತಾವನೆ ಕುರಿತು.**

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಒದಗಿಸಲಾಗುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಲ್ಲಿ ಕಾರ್ಮಿಕ ಗೃಹ ಭಾಗ್ಯ ಸೌಲಭ್ಯವು ಒಂದಾಗಿರುತ್ತದೆ. ಈ ಸೌಲಭ್ಯವನ್ನು ಪಡೆಯಲು ಫಲಾನುಭವಿ ಯಾವುದಾದರೂ ಸರ್ಕಾರದ ವಸತಿ ಸೌಲಭ್ಯದಡಿ ಫಲಾನುಭವಿಯಾಗಿ ಆಯ್ಕೆಯಾಗಿರಬೇಕಾಗಿರುತ್ತದೆ. ಹಾಗೂ ಫಲಾನುಭವಿಗೆ ಸಾಲ ಒದಗಿಸುವ ಸಂಸ್ಥೆ / ಇಲಾಖೆಯ ಮುಖಾಂತರ ಮಂಡಳಿಯಿಂದ ಗರಿಷ್ಟ ರೂ.2,00,000/- ಗಳ ಸಾಲವನ್ನು ನೀಡಲು ಅವಕಾಶವಿರುತ್ತದೆ.

ಈ ಸೌಲಭ್ಯದಡಿ ಈ ಕೆಳಕಂಡ ಸಂಸ್ಥೆ / ಇಲಾಖೆಗಳು ಹಾಗೂ ಜನ ಪ್ರತಿನಿಧಿಗಳು ಪ್ರಸ್ತಾವನೆ ಮಂಡಳಿಗೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ಜಿಲ್ಲೆ | ವಿಧಾನಸಭಾ ಕ್ಷೇತ್ರ | ಅನುಷ್ಠಾನಗೊಳಸುವ ಏಜನ್ಸಿಯ ಹೆಸರು | ಮಂಡಳಿಗೆ ಸಲ್ಲಿಸಿದ ನೋಂದಾಯಿತ ಕಾರ್ಮಿಕರ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1 | ಉತ್ತರಕನ್ನಡ | ಹಳಿಯಾಳ | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 250 |
| 2 | ಹಾವೇರಿ | ಸವಣೂರು | ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ | 100 |
| 3 | ಹಾವೇರಿ | ಶಿಗ್ಗಾಂವ್ | ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ | 92 |
| 4 | ಹಾವೇರಿ | ಬಂಕಾಪುರ | ಅನುಷ್ಠಾನ ಏಜನ್ಸಿಯ ಕುರಿತು ಮಾಹಿತಿ ನೀಡಿರುವುದಿಲ್ಲ | 411 |
| 5 | ಚಿಕ್ಕಮಗಳೂರು | ಚಿಕ್ಕಮಗಳೂರು (ಶ್ರೀ ಸಿಟಿ ರವಿ) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 500 |
| 6 | ಚಾಮರಾನಗರ | ಕೊಳ್ಳೆಗಾಲ (ಶ್ರೀ ಎನ್ ಮಹೇಶ್) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 401 |
| 7 | ಬೆಳಗಾವಿ | ಅಥಣಿ | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 15571 |
| 8 | ಮೈಸೂರು | ನರಸಿಂಹರಾಜ (ಶ್ರೀ ತನ್ವಿರ್ ಸೇಠ್) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | ಮತ ಕ್ಷೇತ್ರದ ಎಲ್ಲಾ ಫಲಾನುಭವಿಗಳಿಗೆ |
| 9 | ಬೆಂಗಳೂರು | ಹೆಬ್ಬಾಳ (ಶ್ರೀ ಸುರೇಶ್) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 412 |
| 10 | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 10863 |
| 11 | ಬೆಂಗಳೂರು | ರಾಜಾಜಿನಗರ (ಶ್ರೀ ಸುರೇಶ್ ಕುಮಾರ್) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 250 |
| 12 | ಹುಬ್ಬಳ್ಳಿ | ಹುಬ್ಬಳ್ಳಿ-ಧಾರವಾಡ ಪೂರ್ವ (ಶ್ರೀ ಪ್ರಸಾದ್ ಅಬ್ಬಯ್ಯ) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 600 |
| 13 | ಗದಗ | ರೋಣ (ಶ್ರೀ ಕಾಳಪ್ಪ ಜಿ ಬಂಡಿ) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 210 |
| 14 | ಉಡುಪಿ | ಕಾರ್ಕಳ (ಶ್ರೀ ವಿ ಸುನಿಲ್ ಕುಮಾರ್) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 300 |
| 15 | ಗದಗ | ಗದಗ (ಶ್ರಿ ಹೆಚ್.ಕೆ ಪಾಟೀಲ್) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 229 |
| 16 | ಉತ್ತರಕನ್ನಡ | ಯಲ್ಲಾಪುರ ಪಟ್ಟಣ ಪಂಚಾಯತಿ | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 579 |

ಮೇಲ್ಕಂಡ ಪ್ರಸ್ತಾವನೆಗಳ ಬಗ್ಗೆ ಕ್ರಮಕೈಗೊಳ್ಳಲು ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಯೋಜನಾ ಅನುಷ್ಠಾನವು ದೀರ್ಘಾವಧಿಯಾಗಿದ್ದು, ಮಂಡಳಿಗೆ ಹೆಚ್ಚಿನ ಆರ್ಥಿಕ ಹೊರೆಯಾಗುವುದರಿಂದ ಈ ಬಗ್ಗೆ ತೀರ್ಮಾನ ಕೈಗೊಳ್ಳಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು.**

## ವಿಷಯ ಸಂಖ್ಯೆ-17

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮ, 2006 ರ ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರಕ್ಕೆ ಈಗಾಗಲೇ ಪ್ರಸ್ತಾಪಿಸಿರುವ ನಿಯಮಗಳಿಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮ, 2006 ರ ಈ ಕೆಳಗಿನ ನಿಯಮಗಳಿಗೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ.

| ಕ್ರಮ ಸಂಖ್ಯೆ | ನಿಯಮ | ಪ್ರಸ್ತಾಪಿಸಿರುವ ತಿದ್ದುಪಡಿ |
|---|---|---|
| 1 | 39(A) | ಪ್ರಸ್ತುತ ನೀಡುತ್ತಿರುವ ಕುಟುಂಬ ಪಿಂಚಣಿಯ ಸಹಾಯ ಧನ ಮೊತ್ತ ರೂ.1,000/-ಗಳನ್ನು ರೂ.2,000/-ಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದ್ದು, ದಿನಾಂಕ: 24-03-2022 ರಂದು ನಡೆದ ತಜ್ಞರ ಸಭೆಯಲ್ಲಿ ಸಹಾಯ ಧನ ಮೊತ್ತ ಹೆಚ್ಚಿಸುವುದನ್ನು ಕೈಬಿಡುವಂತೆ ನಿರ್ಣಯಿಸಲಾಗಿರುತ್ತದೆ. |
| 2 | 42 | ಈ ನಿಯಮವನ್ನು ಮಾರ್ಪಡಿಸಿ, ಎಲ್ಲಾ ನೋಂದಾಯಿತ ಕಟ್ಟಡ ಕಾರ್ಮಿಕರು 21 ವರ್ಷದವರಾಗಿದ್ದು, 50 ವರ್ಷ ವಯಸ್ಸಿನ ದೊಳಗಿನವರಿಗೆ ಗೃಹ ಭಾಗ್ಯ ಯೋಜನೆಯನ್ನು ಪಡೆಯಲು ಮತ್ತು ಪ್ರಸ್ತುತ ನಿಯಮ 42(3) ಗಳನ್ವಯ ಫಲಾನುಭವಿಗಳಿಗೆ ನೀಡುವ ಸಾಲವನ್ನು 10 ಸಮಾನ ಕಂತುಗಳಲ್ಲಿ ವಸೂಲು ಮಾಡಲು ಅವಕಾಶ ಕಲ್ಪಿಸಲು ನಿಯಮಕ್ಕೆ ತಿದ್ದುಪಡಿ ಪ್ರಸ್ತಾಪಿಸಲಾಗಿದೆ. |
| 3 | 45 (5) | ಮಂಡಳಿಯು ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಅವಶ್ಯಕವಾದ ಕಲಿಕಾ ಕಿಟ್‌ಗಳು ಅಥವಾ ಶೈಕ್ಷಣಿಕ ಕಿಟ್‌ಗಳು ಅಥವಾ ಶಾಲಾ ಕಿಟ್ ಗಳನ್ನು ನೀಡಲು ಪ್ರಸ್ತಾಪಿಸಲಾಗಿದೆ. |
| 4 | 49(G) | ಕೆಎಸ್‌ಆರ್‌ಟಿಸಿ ಬಸ್ ಪಾಸ್‌ಗಳಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಅವರು ವಾಸಿಸುವ ಸ್ಥಳದಿಂದ ಅವರು ನಿರ್ವಹಿಸುವ ಕೆಲಸದ ಸ್ಥಳಗಳಿಗೆ ತೆರಳಲು ಬಸ್ ಪಾಸ್ ನ ವೆಚ್ಚವನ್ನು ಮಂಡಳಿಯ ವತಿಯಿಂದ ಭರಿಸಲು ಪ್ರಸ್ತಾಪಿಸಲಾಗಿದೆ. ಈ ಸೌಲಭ್ಯವನ್ನು ಪಡೆಯಲು ಸಲ್ಲಿಸಬೇಕಾದ ಅರ್ಜಿ ನಮೂನೆ 23-ಡಿ ಯನ್ನು ಸಿದ್ದಪಡಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ. |

ಸದರಿ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ವಿಷಯಗಳಲ್ಲಿ ನಿಯಮ 42ರಡಿ ಪ್ರಸ್ತಾಪಿಸಲಾಗಿರುವ ಫಲಾನುಭವಿಗಳಿಗೆ ನೀಡುವ ಸಾಲವನ್ನು 10 ಸಮಾನ ಕಂತುಗಳಲ್ಲಿ ವಸೂಲು ಮಾಡುವ ಬದಲು ಕಾರ್ಮಿಕರ ವಯಸ್ಸನ್ನು ಪರಿಗಣಿಸಿ ಕಂತುಗಳನ್ನು ನಿಗಧಿಪಡಿಸಲು ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ತಿಳಿಸಿದರು.**

ಸರ್ಕಾರದ ಕಾರ್ಯದಶಿಗಳು ಮಾತನಾಡುತ್ತಾ, ನಿಯಮ 49(ಜಿ)ರಡಿ ನೋಂದಾಯಿತ ಕಾರ್ಮಿಕರು ಅವರು ವಾಸಿಸುವ ಸ್ಥಳದಿಂದ ಎಂಬುದರ ಬದಲಾಗಿ ಪ್ರಯಾಣದ ಪ್ರಾರಂಭಿದಿಂದ 45 ಕೀ.ಮೀ. ವರೆಗೆ ಪ್ರಯಾಣಿಸಲು ಅವಕಾಶ ಕಲ್ಪಿಸುವಂತೆ ಸೂಚಿಸಿದರು.

**ಮೇಲಿನ ಬದಲಾವಣೆಯೊಂದಿಗೆ ಸದರಿ ವಿಷಯಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**ವಿಷಯ ಸಂಖ್ಯೆ-18**

**2022-23 ನೇ ಸಾಲಿನ ಆಯವ್ಯಯದಲ್ಲಿ ಅನುಮೋದನೆಗೊಂಡಿರುವ RPL Tender ಕರೆಯಲು ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯುವ ಬಗ್ಗೆ.**

ಕಳೆದ 2020-21ನೇ ಸಾಲಿನಲ್ಲಿ RPL Tender ಮೂಲಕ 63,000 ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ತೃಪ್ತಿಕರವಾಗಿ ತರಬೇತಿಯನ್ನು ನೀಡಲಾಗಿದೆ. ತರಬೇತಿಯ ಸಮಯದಲ್ಲಿ ಯಾವುದೇ ಕಿಟ್‌ಗಳನ್ನು ನೀಡಿರುವುದಿಲ್ಲ. ಆದುದರಿಂದ, ತರಬೇತಿ ಪಡೆಯುವ ಫಲಾನುಭವಿಗಳಿಗೆ ಕಿಟ್‌ಗಳನ್ನು ನೀಡಿ ತರಬೇತಿಯನ್ನು ನೀಡುವುದಾದಲ್ಲಿ ಅತ್ಯಂತ ಉತ್ಸಾಹದಿಂದ ಇನ್ನಷ್ಟು ಹೆಚ್ಚಿನ ಸಂಖ್ಯೆಯ ಫಲಾನುಭವಿಗಳು ಭಾಗವಹಿಸುವುದರಲ್ಲಿ ಸಂಶಯವಿರುವುದಿಲ್ಲ. ಆದ್ದರಿಂದ, "RPL Tender with kit" ಟೆಂಡರ್ ಕರೆಯಬೇಕಿರುತ್ತದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ-19**

**ಮಂಡಳಿಯ ವತಿಯಿಂದ 24/7 ಸಹಾಯವಾಣಿ ಸ್ಥಾಪಿಸಲು ಅನುಮೋದನೆ ನಿಡುವ ಕುರಿತು**

ಮಂಡಳಿಯ ಫಲಾನುಭವಿಗಳಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ ಮತ್ತು ಅವರಿಗೆ ಸೀಗುವ ಸೌಲಭ್ಯ ಕುರಿತು ಕಾರ್ಮಿಕರಿಗೆ ಮಾಹಿತಿ ನೀಡುವ ಸಲುವಾಗಿ ಮಂಡಳಿ ವತಿಯಿಂದ ಪ್ರತ್ಯೇಕವಾದ 24/7 ಸಹಾಯವಾಣಿಯನ್ನು ಸ್ಥಾಪಿಸುವುದು ಅವಶ್ಯಕವಿದ್ದು, ಅರ್ಹ ಸಂಸ್ಥೆಯನ್ನು ಇ-ಟೆಂಡರ್ ಮೂಲಕ ಆಯ್ಕೆ ಮಾಡಿ 24/7 ಸಹಾಯವಾಣಿಯನ್ನು ಸ್ಥಾಪಿಸಬಹುದಾಗಿರುತ್ತದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಅಧಿಕಾರಿಗಳ ಸಭೆ ಕರೆದು ಚರ್ಚಿಸಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಿ ನಿರ್ಣಯ ಕೈಗೊಳ್ಳುವಂತೆ ನಿರ್ಣಯಿಸಲಾಯಿತು.**

## ವಿಷಯ ಸಂಖ್ಯೆ-20

**ಮಂಡಳಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನವನ್ನು ಹೆಚ್ಚಿಸುವ ಕುರಿತು.**

ಮಂಡಳಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸುಮಾರು 70 ಸಿಬ್ಬಂದಿಗಳು ವಿವಿಧ ಹಂತಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಅವರಿಗೆ ವಾರ್ಷಿಕವಾಗಿ ತುಟಿ ಭತ್ಯೆ ಹೆಚ್ಚಳವನ್ನು ಮಾತ್ರ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಲೆ ಏರಿಕೆಯ ಪರಿಣಾಮವಾಗಿ ಅವರ ಜೀವನ ಮಟ್ಟವು ಸುದಾರಿಸುವ ಉದ್ದೇಶದಿಂದ ಈ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನವನ್ನು ಪರಿಷ್ಕರಿಸುವ ಅವಶ್ಯಕತೆವಿರುತ್ತದೆ. ಮಾಸಿಕವಾಗಿ ಪ್ರಸ್ತುತ ಎಲ್ಲಾ ಸಿಬ್ಬಂದಿಗಳಿಗೆ ರೂ.17.00 ಲಕ್ಷ ಅನ್ನು ಪಾವತಿಸಲಾಗುತ್ತಿದ್ದು, ಶೇ.20 ರಷ್ಟು ಹೆಚ್ಚಳವನ್ನು ನೀಡಿದ್ದಲ್ಲಿ ಅಂದಾಜು ಮಾಸಿಕ ರೂ.3.40 ಲಕ್ಷ ವಾರ್ಷಿಕ ರೂ.40.80 ಲಕ್ಷ ಹೆಚ್ಚಳವಾಗುತ್ತದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ನೌಕರರು ಕೆಲಸ ನಿರ್ವಹಿಸುತ್ತಿದ್ದು, ಎಲ್ಲಾ ಇಲಾಖೆಗಳಲ್ಲಿಯೂ ವೇತನವು ಸರಿಸಮಾನವಾಗಿ ಇರಬೇಕಾಗಿರುವುದರಿಂದ ಮಂಡಳಿಯಲ್ಲಿ ಮಾತ್ರವೇ ವೇತನವನ್ನು ಹೆಚ್ಚಿಸಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದ್ದರಿಂದ, ಸದರಿ ಪ್ರಸ್ತಾಪವನ್ನು ಕೈಬಿಡಲಾಯಿತು.**

## ವಿಷಯ ಸಂಖ್ಯೆ-21

**ಮಂಡಳಿಯ ನೋದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ರಾಜ್ಯದಾದ್ಯಂತ KSRTC/NWKSRTC/NEKSRTC ಸಂಸ್ಥೆಗಳ ವತಿಯಿಂದ ಮಾಸಿಕ ಬಸ್ ಪಾಸ್‌ಗಳನ್ನು ವಿತರಿಸುವ ಕುರಿತು.**

2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಸಂಖ್ಯೆ: 391 ರಲ್ಲಿ "ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕಟ್ಟಡ ಕಾರ್ಮಿಕರಿಗೆ ರಿಯಾಯಿತಿ ಬಸ್ ಪಾಸ್ ಯೋಜನೆಯನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ರಾಜ್ಯಾದ್ಯಂತ ವಿಸ್ತರಿಸಲಾಗುವುದು" ಎಂದು ಘೋಷಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಮಂಡಳಿಯ ವತಿಯಿಂದ ರಾಜ್ಯಾದ್ಯಂತ ವಿಸ್ತರಿಸಲು ಸರ್ಕಾರವು ಅನುಮೋದನೆ ನೀಡಿ ಆದೇಶ ಹೊರಡಿಸಿರುತ್ತದೆ. ಈ ಯೋಜನೆಯ ಅನುಷ್ಠಾನಕ್ಕಾಗಿ 2022-23ನೇ ಸಾಲಿನ ಆಯವ್ಯಯದಲ್ಲಿ ರೂ.80.00 ಕೋಟಿ ಅನುದಾನವನ್ನು ಮೀಸಲಿಟ್ಟು ಸರ್ಕಾರದ ಅನುಮೋದನೆ ಪಡೆಯಲಾಗಿರುತ್ತದೆ.

ಕ.ರಾ.ರ.ಸಾ ನಿಗಮ, ವಾ.ಕ.ರ.ಸಾ. ಸಂಸ್ಥೆ ಹಾಗೂ ಕಕರಾಸಾ ನಿಗಮಗಳ ಮೂಲಕ ರಾಜ್ಯಾದ್ಯಂತ ಬಸ್‌ಪಾಸ್ ಯೋಜನೆಯನ್ನು ಜಾರಿಗೊಳಿಸಲು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯವ್ಯವಸ್ಥಾಪಕರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಇವರಿಗೆ ತಿಳಿಸಲಾಗಿತ್ತು. ಅದರಂತೆ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ವಯ ಫಲಾನುಭವಿಯು ತಮ್ಮ ವಾಸಸ್ಥಳದಿಂದ 45 ಕೀ.ಮಿ. ವರೆಗೆ ಪ್ರಯಾಣಿಸಲು ಪ್ರತಿ ಪಾಸಿಗೆ ಮಾಸಿಕ ರೂ.1,400/-ರಂತೆ ವಾರ್ಷಿಕ ರೂ.16,800/- ದರವನ್ನು ನಮೂದಿಸಿರುತ್ತಾರೆ. ಆದರೆ, ಮಂಡಳಿಯಲ್ಲಿ ಈಗಾಗಲೇ ಜಾರಿಯಲ್ಲಿರುವ ಬಿಎಂಟಿಸಿ ಬಸ್‌ಪಾಸ್ ಸೌಲಭ್ಯದಡಿ ಫಲಾನುಭವಿಯು ಬೆಂಗಳೂರು ನಗರಾದ್ಯಾದಂತ ಪ್ರಯಾಣಿಸಲು ಪ್ರತಿ ಪಾಸಿಗೆ ಮಾಸಿಕ ರೂ.1,050/-ರಂತೆ ವಾರ್ಷಿಕ ರೂ.12,600/- ಮೊತ್ತವನ್ನು ಭರಿಸಲಾಗುತ್ತಿರುತ್ತದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು KSRTC/NWKSRTC/NEKSRTC ಸಂಸ್ಥೆಗಳ ಅಧ್ಯಕ್ಷರೊಂದಿಗೆ ಸಭೆ ನಿಗಧಿಪಡಿಸುವಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳಿಗೆ ಸೂಚಿಸಿರುವುದರಿಂದ ಸಭೆ ನಡೆಸಲು ತೀರ್ಮಾನಿಸಿ ಅಧ್ಯಕ್ಷರಿಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಅಧಿಕಾರ ನೀಡಲಾಯಿತು.**

## ವಿಷಯ ಸಂಖ್ಯೆ-22

**ಕಾರ್ಮಿಕ ನಿರೀಕ್ಷಕರು / ಹಿರಿಯ ಕಾರ್ಮಿಕ ನಿರೀಕ್ಷಕರು ಇವರುಗಳಿಗೆ ಮಂಡಳಿಯ ಕೆಲಸಕ್ಕಾಗಿ ಪ್ರತಿ ತಿಂಗಳಿಗೆ ರೂ.5,000/- ರಿಂದ ರೂ.10,000/- ಗಳಿಗೆ ವಾಹನ ಭತ್ಯೆ ಹೆಚ್ಚಿಸುವ ಕುರಿತು**

ಕಾರ್ಮಿಕ ನಿರೀಕ್ಷಕರು / ಹಿರಿಯ ಕಾರ್ಮಿಕ ನಿರೀಕ್ಷಕರು ಕಟ್ಟಡ ಕಾರ್ಮಿಕರ ವಿವಿಧ ಕ್ಲೈಂ ಅರ್ಜಿಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ಮಾಡಲು ಹಾಗೂ ಮಂಡಳಿಯ ಯೋಜನೆಗಳನ್ನು ಜಾರಿಗೆ ತರಲು ಹೆಚ್ಚಿನ ಶ್ರಮವಹಿಸಿ ಕೆಲಸ ನಿರ್ವಹಿಸುತ್ತಿರುವುದರಿಂದ ಸಕಾಲದಲ್ಲಿ ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ವಾಹನ ಭತ್ಯೆಯಾಗಿ ತಿಂಗಳಿಗೆ ತಲಾ ರೂ.5000/-ಗಳನ್ನು ವಾಹನ ಭತ್ಯೆಯಾಗಿ ಮಂಜೂರು ಮಾಡಿರುತ್ತಾರೆ.

ಆದರೆ, ಪೆಟ್ರೋಲ್ ಮತ್ತು ಡೀಸಲ್ ಬೆಲೆಯು ಸಹ ಏರಿಕೆಯಾಗಿದ್ದು, ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರು / ಹಿರಿಯ ಕಾರ್ಮಿಕ ನಿರೀಕ್ಷಕರು ಅವರ ವ್ಯಾಪ್ತಿಯ ಕ್ಲೈಂ ಅರ್ಜಿಗಳ ಪರಿಶೀಲನೆಗಾಗಿ ಸುಮಾರು ಕಿ.ಮಿ ಗಳು ಪ್ರಯಾಣಿಸಬೇಕಾಗಿದ್ದು, ಮಂಡಳಿಯ ಯೋಜನೆಗಳು ಕಟ್ಟಡ ಕಾರ್ಮಿಕರಿಗೆ ಶೀಘ್ರವಾಗಿ ತಲುಪಲು ಅನುಕೂಲವಾಗುವುದರಿಂದ ಕಾರ್ಮಿಕ ನಿರೀಕ್ಷಕರಿಗೆ ಪ್ರಸ್ತುತ ನೀಡುತ್ತಿರುವ ವಾಹನ ಭತ್ಯೆ ರೂ.5000/- ರಿಂದ ರೂ.10,000/- ಗಳಿಗೆ ಹೆಚ್ಚಿಸುವ ಕುರಿತ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಕಾರ್ಮಿಕ ನಿರೀಕ್ಷಕರು / ಹಿರಿಯ ಕಾರ್ಮಿಕ ನಿರೀಕ್ಷಕರು ಇವರುಗಳಿಗೆ ಮಂಡಳಿಯ ಕೆಲಸಕ್ಕಾಗಿ ಪ್ರತಿ ತಿಂಗಳಿಗೆ ರೂ.5,000/- ವಾಹನ ಭತ್ಯೆ ಈಗಾಗಲೇ ನೀಡಲಾಗುತ್ತಿದ್ದು, ಪುನಃ ಹೆಚ್ಚಿಸಲು ಸೂಕ್ತವಾಗಿರುವುದಿಲ್ಲವೆಂದು ತಿಳಿಸಿ ಈಗಾಗಲೇ ನಿಗಧಿಪಡಿಸಿರುವ ಮೊತ್ತವನ್ನು ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

## ವಿಷಯ ಸೂಚಿ–23

**ಕೊಪ್ಪಳ್ಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗಾಗಿ ಕೊಪ್ಪಳ್ಳ ನಗರದ ಕೊಪ್ಪಳ್ಳ – ಕುಷ್ಟಗಿ ರಸ್ತೆಯಲ್ಲಿರುವ ಪದಕಿ ಲೇಔಟ್‌ನಲ್ಲಿರುವ ನಾಗರೀಕ ಸೌಲಭ್ಯವುಳ್ಳ 1 ಎಕರೆ 8 ಗುಂಟೆ ನಿವೇಶನದ ಭೂ ಬೆಲೆ ಮತ್ತು ನೋಂದಣಿ ಶುಲ್ಕ ರೂ.68,56,100.00 ಗಳನ್ನು ಪಾವತಿಸುವ ಕುರಿತು**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ವಸತಿ ಸೌಲಭ್ಯಕ್ಕಾಗಿ ಕೊಪ್ಪಳ್ಳ ಜಿಲ್ಲಾ ಕೇಂದ್ರದಲ್ಲಿ ಟ್ರಾನ್ಸಿಟ್ ಅಕಾಮಿಡೇಷನ್ (Transit Accommodation) ನಿರ್ಮಾಣಕ್ಕಾಗಿ ಹಾಗೂ ಕಟ್ಟಡ ಕಾರ್ಮಿಕರ ಇತರೆ ಸೌಲಭ್ಯಗಳಿಗಾಗಿ ನಾಗರೀಕಾ ಸೌಲಭ್ಯವುಳ್ಳ ನಿವೇಶನ ಮಂಜೂರು ಮಾಡುವಂತೆ ಕೊಪ್ಪಳ್ಳ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಗೆ ಮನವಿ ಸಲ್ಲಿಸಲಾಗಿತ್ತು. ಅದರಂತೆ ಕೊಪ್ಪಳ್ಳ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯ ಕೊಪ್ಪಳ್ಳ ನಗರದ ಕೊಪ್ಪಳ್ಳ –ಕುಷ್ಟಗಿ ರಸ್ತೆಯಲ್ಲಿರುವ ಪದಕಿ ಲೇಔಟ್‌ನಲ್ಲಿ ನಾಗರೀಕ ಸೌಲಭ್ಯದ ನಿವೇಶನದ ಸರ್ವೆ ನಂ 92/2,3,4,6,7,11,12,13,14 ರ ನಿವೇಶನ ಸಂಖ್ಯೆ 633 ರಲ್ಲಿ 4891.50 ಚದರ ಮೀ. (1 ಎಕರೆ 8 ಗುಂಟೆ) ವಿಸ್ತೀರ್ಣದ ನಿವೇಶನವನ್ನು ನಾಗರೀಕ ಸೌಲಭ್ಯ ನಿವೇಶನದ ಮೊತ್ತ ರೂ.1,36,96,200/–ಗಳಾಗಿದ್ದು ಸರ್ಕಾರದ ಇಲಾಖೆಗೆ ಶೇ.50% ರಂತೆ ಅಂದರೆ ರೂ.68,48,100/–ಗಳು, ಅರ್ಜಿ ಶುಲ್ಕ ರೂ.1000/–, ನೋಂದಣಿ ಶುಲ್ಕ ರೂ.7000/– ಗಳಂತೆ ಒಟ್ಟು ರೂ.68,56,100/–ಗಳನ್ನು ಪಾವತಿಸಿದ್ದಲ್ಲಿ ನಾಗರೀಕ ಸೌಲಭ್ಯ ನಿವೇಶನದ ಹಂಚಿಕೆ ಕಾಯ್ದೆ 1991 ರಡಿ 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಕ್ರಮವಹಿಸುವುದಾಗಿ ಕೊಪ್ಪಳ ಜಿಲ್ಲೆಯ ಕಾರ್ಮಿಕ ಅಧಿಕಾರಿಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರ ಕೊಪ್ಪಳ ರವರು ಪತ್ರ ಬರೆದಿರುತ್ತಾರೆ.

ಆದ್ದರಿಂದ ಸದರಿ ನಿವೇಶನಕ್ಕಾಗಿ ರೂ.68,56,100/– ಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ ಕೊಪ್ಪಳ ರವರಿಗೆ ಪಾವತಿಸುವ ಸಂಬಂಧ ಮಂಡಳಿಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಖರೀದಿಸಿದ ನಂತರ ಮಂಡಳಿಯ ಎಲ್ಲಾ ನಿವೇಶನಗಳಿಗೆ ಕಾಂಪೌಂಡ್ ಗೋಡೆ ನಿರ್ಮಿಸಲು ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.**

## ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಇತರೆ ವಿಷಯಗಳ ಚರ್ಚೆ

ವಿಷಯ ಸೂಚಿ-01

### ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಈಗಾಗಲೇ ವಿತರಿಸಿರುವ Tool Kit ಗಳನ್ನು ಖರೀದಿಸಿ ವಿತರಿಸುವ ಕುರಿತು ಅನುಮೋದನೆ ನೀಡುವ ಬಗ್ಗೆ

2020-21 ಮತ್ತು 2021-22ನೇ ಸಾಲಿನಲ್ಲಿ ಈ ಕೆಳಗಿನ ವಿವರಗಳಂತೆ ಟೂಲ್ ಕಿಟ್‌ಗಳನ್ನು ಟೆಂಡರ್ ಮೂಲಕ ಖರೀದಿಸಿ ಪ್ರಾದೇಶಿಕವಾರು ಈಗಾಗಲೇ ವಿತರಿಸಲಾಗಿದೆ.

| 2020-21 | | |
|---|---|---|
| ಕ್ರ.ಸಂ | ಟೂಲ್‌ಕಿಟ್‌ಗಳ ಹೆಸರು | ಟೂಲ್ ಕಿಟ್‌ಗಳ ಸಂಖ್ಯೆ |
| 1 | Barbending | 5625 |
| 2 | Carpentry | 5600 |
| 3 | Electrician | 4625 |
| 4 | Painting | 8605 |
| 5 | Plumbing | 5293 |
| 6 | Mason | 95000 |

| 2021-22 | | | |
|---|---|---|---|
| ಕ್ರ.ಸಂ | ವಿಭಾಗ | ಟೂಲ್‌ಕಿಟ್‌ಗಳ ಹೆಸರು | ಟೂಲ್ ಕಿಟ್‌ಗಳ ಸಂಖ್ಯೆ |
| 1 | ALC-1, ALC2 , ALC3, ALC4 and ALC- Mysuru of Bengaluru1 Region & Bengaluru2 Region. | BarBending TK | 3636 |
| 2 | ALC-1, Bengaluru1 | Carpentry | 1926 |
| 3 | ALC-1, Bengaluru1 | Electrician | 1905 |
| 4 | ALC-1, Bengaluru1 | Painting | 2529 |
| 5 | ALC-1 and ALC2,ALC-3, ALC-4 and ALC-Mysuru , Bengaluru1 &2 | Plumbing | 3908 |
| 6 | ALC-1, Bengaluru1 | Mason TK | 6912 |
| 7 | ALC Chickmagalur, ALC Hassan & ALC DK | BarBending TK | 2747 |
| 8 | BNG-2 (ALC3 & ALC4) | Carpentry | 2189 |
| 9 | BNG-1 (ALC2) | Painting | 5367 |
| 10 | BNG-2 (ALC3 & ALC4)) | Mason TK | 5330 |
| 11 | Belagavi & Hubli | BarBending TK | 4717 |
| 12 | Mysore & BNG-2 | Carpentry | 3800 |
| 13 | Mysore & BNG-2 | Electrician | 3683 |
| 14 | BNG-2 (ALC3, ALC4 & ALC mysore) | Painting | 6088 |
| 15 | ALC-Belagavi | Plumbing | 2102 |
| 16 | Davanagere & Kalburgi | BarBending TK | 4153 |
| 17 | Chickmagalore & Hassan | Carpentry | 3492 |
| 18 | Chickmagalore & Hassan | Electrician | 3454 |
| 19 | Chickmagalore & Hassan | Painting | 3802 |
| 20 | Davanagere & Kalburgi | BarBending TK | 1871 |
| 21 | Dakshin Kannada & Hassan | Painting | 6767 |

| | | | |
|---|---|---|---|
| 22 | Davanagere & Kalburgi | Plumbing | 2011 |
| 23 | BNG-2 (ALC3 & ALC4)) | Electrician | 2166 |
| 24 | Chickmagalore, DK (ALC-2) & Hassan | Plumbing | 2953 |
| 25 | Hubli & Belagavi | Plumbing | 2969 |
| | | ಒಟ್ಟು | 90477 |

ಮುಂದುವರೆದು, 2021-22ನೇ ಸಾಲಿನಲ್ಲಿ ಈ ಕೆಳಕಂಡ ಒಟ್ಟು 24 ವಿವಿಧ ಟೆಂಡರ್‌ಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಅರ್ಹ ಸಂಸ್ಥೆಯ ಆಯ್ಕೆಗಾಗಿ ಇ-ಟೆಂಡರ್ ಕರೆಯಲಾಗಿದೆ.

| 2021-22_ಸರ್ಕಾರದ ವತಿಯಿಂದ ಅನುಮೋದಿಸಲಾದ ಟೆಂಡರ್‌ಗಳು | | | |
|---|---|---|---|
| ಕ್ರ.ಸಂ | ವಿಭಾಗ | ಟೂಲ್‌ಕಿಟ್‌ಗಳ ಹೆಸರು | ಟೂಲ್ ಕಿಟ್‌ಗಳ ಸಂಖ್ಯೆ |
| 1 | Carpentry | ಬೆಳಗಾವಿ ವಿಭಾಗ | 6908 |
| 2 | Electrician | ದಾರವಾಡ ಉಪವಿಭಾಗ | 9655 |
| 3 | Carpentry | ದಕ್ಷಿನ ಕನ್ನಡ | 6215 |
| 4 | Electrician | ಬೆಂಗಳೂರು ನಗರ -2 | 4877 |
| 5 | Electrician | ದಾವಣಗೆರೆ ಉಪವಿಭಾಗ | 6540 |
| 6 | Carpentry | ದಾರವಾಡ ಉಪವಿಭಾಗ | 9760 |
| 7 | Painting | ಕಲ್ಬುರ್ಗಿ ವಿಭಾಗ | 15974 |
| 8 | Plumbing | ಕಲ್ಬುರ್ಗಿ ವಿಭಾಗ | 4464 |
| 9 | Mason | ದಾವಣಗೆರೆ ಉಪವಿಭಾಗ | 19669 |
| 10 | Carpentry | ದಾವಣಗೆರೆ ಉಪವಿಭಾಗ | 6612 |
| 11 | Electrician | ಬೆಳಗಾವಿ ವಿಭಾಗ | 6834 |
| 12 | Electrician | ಕಲ್ಬುರ್ಗಿ ವಿಭಾಗ | 14514 |
| 13 | Mason | ಬೆಂಗಳೂರು ನಗರ -2 | 14666 |
| 14 | Mason | ಹಾಸನ ವಿಭಾಗ | 10388 |
| 15 | Carpentry | ಕಲ್ಬುರ್ಗಿ ವಿಭಾಗ | 14673 |
| 16 | Electrician | ದಕ್ಷಿನ ಕನ್ನಡ | 6148 |
| 17 | Painting | ದಾರವಾಡ ಉಪವಿಭಾಗ | 10626 |
| 18 | Carpentry | ಬೆಂಗಳೂರು ನಗರ | 4930 |
| 19 | Mason | ದಾರವಾಡ ಉಪವಿಭಾಗ | 27037 |
| 20 | Painting | ಬೆಳಗಾವಿ ವಿಭಾಗ | 7521 |
| 21 | Mason | ಮೈಸೂರು ವಿಭಾಗ | 11306 |
| 22 | Mason | ಬೆಳಗಾವಿ ವಿಭಾಗ | 22551 |
| 23 | Mason | ದಕ್ಷಿನ ಕನ್ನಡ | 18490 |
| 24 | Painting | ದಾವಣಗೆರೆ ಉಪವಿಭಾಗ | 7198 |
| | | ಒಟ್ಟು | 267556 |

ಮೇಲ್ಕಂಡ ಟೆಂಡರ್ ಗಳಲ್ಲಿ ಅರ್ಹ ಸಂಸ್ಥೆಯ ಆಯ್ಕೆ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಸದರಿ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಮಹಿಳಾ ಕಾರ್ಮಿಕರಿಗೆ ವಿಶೇಷ ತರಬೇತಿ ನೀಡಿ ಕಿಟ್‌ಗಳನ್ನು ವಿತರಿಸುವಂತೆ ಮಂಡಳಿಯ ಸದಸ್ಯರು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು. ಈ ಕುರಿತು ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ತರೋಣ ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.**

## ವಿಷಯ ಸೂಚಿ-02

**ಮಂಡಳಿಯ ಕ್ಷೇತ್ರ ಕಛೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಹಾಜರಾತಿ ದಾಖಲೆಗಾಗಿ ಕೇಂದ್ರಿಕೃತ ತಂತ್ರಾಂಶವುಳ್ಳ ಬಯೋ ಮೆಟ್ರಿಕ್ ಮಿಷಿನ್‌ಗಳನ್ನು ಕ್ಷೇತ್ರ ಕಛೇರಿಗಳಲ್ಲಿ ಅಳವಡಿಸಲು ಅನುಮೋದನೆ ನೀಡುವ ಕುರಿತು**

ಕಾರ್ಮಿಕ ಇಲಾಖೆಯ ಕ್ಷೇತ್ರ ಮಟ್ಟದ ಕಛೇರಿಗಳಲ್ಲಿ ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಏಜನ್ಸಿ ಮುಖಾಂತರ ನೇಮಕ ಮಾಡಿಕೊಳ್ಳಲಾಗಿದ್ದು, ಇವರ ವೇತನವನ್ನು ಪಾವತಿಸಲು ಪ್ರತಿ ಮಾಹೆ ಅವರ ಹಾಜರಾತಿ ಮಾಹಿತಿಯನ್ನು ಮ್ಯಾನುಯಲ್ ಮೂಲಕ ತರಿಸಿಕೊಂಡು ಅವರಿಗೆ ವೇತನವನ್ನು ಸರಿಯಾದ ಸಮಯಕ್ಕೆ ಪಾವತಿಸಲು ವಿಳಂಬವಾಗುತ್ತಿದೆ.

ಆದುದರಿಂದ ಹೊರಗುತ್ತಿಗೆ ನೌಕರರು ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕ ಇಲಾಖೆಯ ಕ್ಷೇತ್ರ ಕಛೇರಿಗಳಲ್ಲಿ ಬಯೋ ಮೆಟ್ರಿಕ್ ಮಿಷಿನ್ ಅನ್ನು ಅಳವಡಿಸಿ ಕೇಂದ್ರಿಕೃತ ತಂತ್ರಾಂಶವನ್ನು ಮಂಡಳಿಯ ಕೇಂದ್ರ ಕಛೇರಿಯಲ್ಲಿ ನಿರ್ವಹಿಸಿದ್ದಲ್ಲಿ ಸದರಿ ನೌಕರರ ಹಾಜರಾತಿಯನ್ನು ಸರಿಯಾದ ಸಮಯಕ್ಕೆ ಪಡೆದು ಅವರಿಗೆ ವೇತನ ಪಾವತಿಸಲು ಅನುಕೂಲವಾಗುತ್ತದೆ. ಈ ವಿಷಯವನ್ನು ಮಂಡಳಿಯ ಅನುಮೋದನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸೂಚಿ-03

**ಮಂಡಳಿಯ ಕಲ್ಯಾಣ ಸುರಕ್ಷಾ ಭವನದ 4ನೇ ಮಹಡಿಯಲ್ಲಿ ರೆಕಾರ್ಡ್ ರೂಂ ಸ್ಥಾಪಿಸಲು ಅನುಮೋದನೆ ನೀಡುವ ಕುರಿತು**

ಮಂಡಳಿಯಲ್ಲಿ ವಿಲೇವಾರಿಯಾದ ಕಡತ ಮತ್ತು ಅವಶ್ಯಕವಾದ ದಾಖಲೆಗಳನ್ನು ಧೀರ್ಘಕಾಲದವರೆಗೆ ಸುರಕ್ಷತೆಯಾಗಿ ನಿರ್ವಹಿಸಲು ಒಂದು ಪ್ರತ್ಯೇಕವಾದ ರೆಕಾರ್ಡ್ ರೂಂ ಮಂಡಳಿಗೆ ಅವಶ್ಯಕವಾಗಿರುತ್ತದೆ. ಇದನ್ನು ಮಂಡಳಿಯ ಕಲ್ಯಾಣ ಸುರಕ್ಷಾ ಭವನದ 4ನೇ ಮಹಡಿಯಲ್ಲಿ ಸ್ಥಾಪಿಸಲು ಸ್ಥಳಾವಕಾಶವಿರುತ್ತದೆ. ಈ ವಿಷಯವನ್ನು ಮಂಡಳಿಯ ಅನುಮೋದನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

ವಿಷಯ ಸೂಚಿ-04

**Preventive Health Care ಯೋಜನೆಯಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನಡೆಸಲಾಗುವ ವೈದ್ಯಕೀಯ ಪರೀಕ್ಷೆಗಳಲ್ಲಿ ಗಂಭೀರ ಕಾಯಿಲೆಗಳು ಕಂಡು ಬರುವ ಫಲಾನುಭವಿಗಳಿಗೆ ಉಚಿತ ವೈದ್ಯಕೀಯ ನೆರವು ಒದಗಿಸುವ ಕುರಿತು**

ಮಂಡಳಿಯ ವತಿಯಿಂದ ನೋಂದಾಯಿತ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗೆ ಆರೋಗ್ಯ ತಪಾಸಣೆ ಮತ್ತು 20 ವಿವಿಧ ರೀತಿಯ ವೈದ್ಯಕೀಯ ಪರೀಕ್ಷೆಗಳನ್ನು ನಡೆಸುವ Preventive Health Care ಯೋಜನೆಯನ್ನು 30 ಉಪ ವಿಭಾಗಗಳನ್ನು ಜಾರಿಗೊಳಿಸಲಾಗಿರುತ್ತದೆ. ಈ ಯೋಜನೆಯಡಿ ಒಟ್ಟು 9.32 ಲಕ್ಷ ಕಾರ್ಮಿಕರ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. ಇದುವರೆಗೂ 4.12 ಲಕ್ಷ ಕಾರ್ಮಿಕರಿಗೆ ವಿವಿಧ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲಾಗಿದ್ದು, ಅದರಲ್ಲಿ ಕೆಲವೊಂದಷ್ಟು ಮಂದಿಗೆ ಹೆಚ್.ಐ.ವಿ, ಕ್ಯಾನ್ಸರ್ ಮುಂತಾದ ಗಂಭೀರ ಕಾಯಿಲೆಗಳು ಇರುವುದು ಕಂಡು ಬಂದಿರುತ್ತದೆ. ಈ ಕಾಯಿಲೆಗಳಿಗೆ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಂಡಲ್ಲಿ ಕಾರ್ಮಿಕರ ಜೀವವನ್ನು ಕಾಪಾಡಬಹುದಾಗಿರುತ್ತದೆ. ಪ್ರಸ್ತುತ ಕಟ್ಟಡ ಕಾರ್ಮಿಕರು ಸಂಕಷ್ಟದಲ್ಲಿ ಜೀವನ ನಡೆಸುವುದು ಸರ್ವೆ ಸಾಮಾನ್ಯವಾಗಿರುವುದರಿಂದ ಈ ರೀತಿಯ ಗಂಭೀರ ಕಾಯಿಲೆಗಳಿಗೆ ಸೂಕ್ತ ಚಿಕಿತ್ಸೆಯನ್ನು ಪಡೆಯುವುದು ಕಷ್ಟವಾಗಿರುತ್ತದೆ. ಹಾಗಾಗಿ, ಇಂತಹಕಾರ್ಮಿಕರಿಗೆ ಮಂಡಳಿಯ ವತಿಯಿಂದ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲು ಕ್ರಮವಹಿಸಬಹುದಾಗಿರುತ್ತದೆ.

ಈ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ: ಈ ಬಗ್ಗೆ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಗಂಭೀರ ಕಾಯಿಲೆಗಳಾದ ಟಿಬಿ, ಹೆಚ್.ಐ.ವಿ. ಮತ್ತು ಕ್ಯಾನ್ಸರ್ ಕಾಯಿಲೆಗಳಿಗೆ ಸರ್ಕಾರವು ಉಚಿತವಾಗಿ ಚಿಕಿತ್ಸೆ ನೀಡುತ್ತಿದೆ ಹಾಗೂ ಸರ್ಕಾರವು ಆಯುಷ್ಮಾನ್ ಭಾರತ್ ಯೋಜನೆಯಡಿ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ನೀಡುತ್ತಿರುವುದರಿಂದ ಮಂಡಳಿಯು ಈ ಸಂಬಂಧ ಪ್ರತ್ಯೇಕ ಉಚಿತ ವೈದ್ಯಕೀಯ ಚಿಕಿತ್ಸೆ ಯೋಜನೆ ರೂಪಿಸುವ ಅಗತ್ಯವಿರುವುದಿಲ್ಲವೆಂದು ತಿಳಿಸಿದರು.**

**ಸರ್ಕಾರದ ಕಾರ್ಯದರ್ಶಿಗಳು ಮಾತನಾಡುತ್ತಾ, ಹೆಚ್.ಐ.ವಿ. ಕಾಯಿಲೆ, ಟಿಬಿ ಕಾಯಿಲೆಗೆ ಸಂಬಂಧಿಸಿದಂತೆ, ಗುಪ್ತ ವರದಿಯನ್ನು ಸಂಬಂಧಪಟ್ಟ ವಿಶೇಷ ಕಾಳಜಿ ಕೇಂದ್ರಗಳಿಗೆ (Special Care Centres) ರವಾನಿಸಿ ರೋಗಿಗಳು ಹೆಚ್ಚಿನ ಚಿಕಿತ್ಸೆಗೆ ಅನುಕೂಲ ಮಾಡಿಕೊಡಲು Preventive Health Care ಯೋಜನೆ ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಗಳಿಗೆ ಸೂಚಿಸುವಂತೆ ಮಂಡಳಿಯ ಕಾರ್ಯದರ್ಶಿಗಳಿಗೆ ಸೂಚಿಸಿದರು. ಈ ನಿಟ್ಟಿನಲ್ಲಿ ಸುವರ್ಣ ಆರೋಗ್ಯ ಟ್ರಸ್ಟ್ ಕೂಡಾ ಕಾರ್ಯಗತವಾಗಿರುವುತ್ತದೆಂದು ಸಭೆಗೆ ಮಾಹಿತಿ ನೀಡಿದರು. ಈ ಸಂಬಂಧ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ರವರು ಆರೋಗ್ಯ ಇಲಾಖೆಯೊಂದಿಗೆ ಸಭೆ ನಡೆಸಿ ಸೂಕ್ತ ವೈದ್ಯಕೀಯ ಉಪಚಾರ ಒದಗಿಸಲು ಮತ್ತು ಈ ಬಗ್ಗೆ ವರದಿ ಸಲ್ಲಿಸಲು ಸೂಚಿಸಿ ಮುಂದಿನ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ತೀರ್ಮಾನಿಸಲಾಯಿತು.**

## ವಿಷಯ ಸೂಚಿ-05

**ಸರ್ಕಾರದ ಕಾರ್ಯದರ್ಶಿಯವರ ಕೊಠಡಿಯ ನವೀಕರಣಕ್ಕಾಗಿ ಮಂಡಳಿಯಿಂದ ರೂ.27.00 ಲಕ್ಷ ಪಾವತಿಸಲು ಅನುಮೋದನೆ ನೀಡುವ ಕುರಿತು.**

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ ಇವರ ಕಛೇರಿಯಲ್ಲಿ ಕೊಠಡಿಯ ನವೀಕರಣ ಕಾರ್ಯವನ್ನು ಒಟ್ಟು ರೂ.27.00 ಲಕ್ಷ ಮೊತ್ತದಲ್ಲಿ ಮಾಡಲಾಗಿದ್ದು, ಸದರಿ ಕಾರ್ಯಕ್ಕೆ ಖರ್ಚಾಗಿರುವ ಮೊತ್ತವನ್ನು ಮಂಡಳಿಯಿಂದ ಪಾವತಿಸಲು ಅನುಮೋದನೆ ನೀಡುವಂತೆ ಕಾರ್ಯದರ್ಶಿಯವರು ಸಭೆಗೆ ಮಂಡಿಸಿದರು.

**ತೀರ್ಮಾನ: ಸಭೆಯು ಕೂಲಂಕುಶವಾಗಿ ಚರ್ಚಿಸಿ ರೂ.27.00 ಲಕ್ಷ ಮೊತ್ತವನ್ನು ಪಾವತಿಸಲು ಅನುಮೋದನೆ ನೀಡಿತು.**

## ವಿಷಯ ಸೂಚಿ-06

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ಸುಂಕ ಮೊತ್ತವನ್ನು ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಇಟ್ಟಿರುವ ಬಗ್ಗೆ ಅನುಮೋದನೆ ನೀಡುವ ಕುರಿತು**

| ಕ್ರ.ಸಂ | FD ಇಟ್ಟಿರುವ ಖಾತೆ ಸಂಖ್ಯೆ | ಬ್ಯಾಂಕ್ ಗಳ ವಿವರಗಳು | No of FD's | FD ಇಟ್ಟಿರುವ ದಿನಾಂಕ | FD ಇಟ್ಟಿರುವ ಮೊತ್ತ ರೂ. | ಬಡ್ಡಿ ದರ |
|---|---|---|---|---|---|---|
| 01 | 1371401004604 (Linked to79786 A/c) | ಕೆನರಾಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 1575 | 22.06.2021 ರಿಂದ 15.06.2022 ರವರೆಗೆ | 1550,69,06,886/- | 5.30 % |
| 02 | 1371401003636/3862 2021-22 ನೇ ಸಾಲಿನ ಠೇವಣಿಗಳು | ಕೆನರಾಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 598 | 12.09.2021 ರಿಂದ 15.06.2022 ರವರೆಗೆ | 607,60,69,464/- | 5.30 % |
| 03 | 1371441000013/1 (Non-callable FD) | ಕೆನರಾಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 01 | 20/06/2021 ರಿಂದ 20/06/2022 | 500,00,00,000/- | 3.81 % |
| 04 | 1371441000014/1 (Non-callable FD) | ಕೆನರಾಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 01 | 03/07/2021 ರಿಂದ 03/07/2022 | 1000,00,00,000/- | 3.81 % |
| 05 | 1371441000014/2 (Non-callable FD) | ಕೆನರಾಬ್ಯಾಂಕ್ ಹೊಂಬೆಗೌಡ ನಗರ ಶಾಖೆ | 01 | 03/07/2021 ರಿಂದ 03/07/2022 | 500,00,00,000/- | 3.81 % |

| | | | | | | |
|---|---|---|---|---|---|---|
| 06 | 71423030000124 (Non-callable FD) | ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಜಲಭವನ ಶಾಖೆ | 01 | 14/07/2021 ರಿಂದ 14/07/2022 | 687,00,00,000/- | 3.70 % |
| 07 | 6650300025892 (Non-callable FD) | ಬ್ಯಾಂಕ್ ಆಫ್ ಬರೋಡ ಬ್ರಿಗೇಡ್ ರೋಡ್ ಶಾಖೆ | 01 | 13/08/2021 ರಿಂದ 13/08/2022 | 1000,00,00,000/- | 3.55 % |
| 08 | 5190300023642 (Non-callable FD) | ಬ್ಯಾಂಕ್ ಆಫ್ ಬರೋಡ ಕೆ.ಜಿ ರೋಡ್ ಶಾಖೆ | 01 | 27/08/2021 ರಿಂದ 27/08/2022 | 500,00,00,000/- | 3.65 % |
| 09 | 71423030000227 (Non-callable FD) | ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಜಲಭವನ ಶಾಖೆ | 01 | 06/12/2021 ರಿಂದ 06/12/2022 | 500,00,00,000/- | 3.81 % |
| 10 | 73890100026129 | ಬ್ಯಾಂಕ್ ಆಫ್ ಬರೋಡ ಮೆಯೊ ಹಾಲ್ ಶಾಖೆ | 183 | 01/04/2022 ರಿಂದ 15/06/2022 | 256,28,42,161/- | 5.20% |
| | ಒಟ್ಟು | | 2363 | | 7101,58,18,511/- | |

**ಈ ಮೇಲಿನ ಮೊತ್ತವನ್ನು ಎಫ್‌ಡಿ ಇಟ್ಟಿರುವ ಬಗ್ಗೆ ಅನುಮೋದನೆ ನೀಡಿ, ಮುಂದುವರೆದು, ಮಂಡಳಿಯಲ್ಲಿ ಸಂಗ್ರಹವಾಗುವ ಸುಂಕ ನಿಧಿಯನ್ನು ಬ್ಯಾಂಕ್‌ಗಳಲ್ಲಿ ಠೇವಣಿ ಇಡಲು ಇ- ಪೋರ್ಟ್‌ಲ್‌ನಲ್ಲಿ ಇ-ಆಕ್ಷನ್ ಕರೆಯುವಾಗ ಸುಂಕ ಮೊತ್ತಕ್ಕೆ ಹೆಚ್ಚಿನ ಬಡ್ಡಿಯನ್ನು ಮಂಡಳಿಗೆ ಅನುಕುಲವಾಗುವಂತೆ ಸಂಗ್ರಹಿಸುವ ನಿಟ್ಟಿನಲ್ಲಿ ಬ್ಯಾಂಕ್‌ಗಳಲ್ಲಿ ಠೇವಣಿ ಇಡಲು ವಿಳಂಬವಾದರೂ ಸಹಿತ ಇ-ಆಕ್ಷನ್ ಕರೆದು ಮಂಡಳಿಗೆ ಹೆಚ್ಚಿನ ಬಡ್ಡಿದರ ಆಕರ್ಷಿಸುವ ನಿಟ್ಟಿನಲ್ಲಿ ಕ್ರಮವಹಿಸುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿ ಸಭೆಯಲ್ಲಿ ನಿರ್ಣಯಿಸಲಾಯಿತು.**

ಮುಂದುವರೆದು, ಕೆನರಾ ಬ್ಯಾಂಕ್, ಕಾರ್ಮಿಕರ ಕಲ್ಯಾಣ ಮಂಡಳಿ ಶಾಖೆಯಲ್ಲಿ Sweep-in Sweep-out ಖಾತೆ ಹಾಗೂ Auto renewal. FD ಗಳಿಗೆ ಪ್ರಸ್ತುತದಲ್ಲಿ ಶೇ. 5.30 ವಾರ್ಷಿಕ ಬಡ್ಡಿದರ ನೀಡಲಾಗುತ್ತದೆ. ಹಾಗೂ ಪ್ರಸ್ತುತದಲ್ಲಿ Non-callable FD ಗಳಿಗೆ ನೀಡುವ ಬಡ್ಡಿದರವು ತುಂಬಾ ಹೆಚ್ಚಾಗುತ್ತಿದೆ. ಒಂದು ವೇಳೆ Sweep-in Sweep-out FD ಗಳನ್ನು ಅವಧಿ ಪೂರ್ವದಲ್ಲಿ ಮುಕ್ತಾಯಗೊಳಿಸಿದಲ್ಲಿ ಶೆ. 1 ರಷ್ಟು ಬಡ್ಡಿದರದಲ್ಲಿ ಕಡಿತಗೊಳಿಸಲಾಗುತ್ತಿದೆ. Non-callable FD ಗಳಿಗೆ ವಾಸ್ತವವಾಗಿ ಬಡ್ಡಿದರ ಶೇ. 6.50 ಕ್ಕಿಂತ ಹೆಚ್ಚಿರುವುದರಿಂದ ಈಗಿರುವ Sweep-in Sweep-out ಖಾತೆ ಹಾಗೂ Auto renewal FD ಗಳನ್ನು ಮುಕ್ತಾಯಗೊಳಿಸಿ. Non-callable FD ಗಳಾಗಿಡಲು E-Auction ಕರೆಯಲು ಸಭೆಯು ಸುದೀರ್ಘವಾಗಿ ಚರ್ಚಿಸಿ, ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**ಚರ್ಚಿಸಿದ ಇತರೆ ವಿಷಯಗಳು:**

1. ಈ ಹಿಂದೆ ಕಾರ್ಮಿಕ ಅದಾಲತ್‌ಗಳನ್ನು ಜಿಲ್ಲಾ ಮಟ್ಟದಲ್ಲಿ ಮಾಡುವುದರ ಮೂಲಕ ಶೇ.99% ಬಾಕಿ ಇರುವ ಕಡತಗಳನ್ನು ವಿಲೇವಾರಿ ಮಾಡಲಾಗಿರುತ್ತದೆ. ಅದೇ ಮಾದರಿಯಲ್ಲಿ ಪುನಃ ಒಂದು ತಿಂಗಳು ಕಾರ್ಮಿಕ ಅದಾಲತ್‌ಗಳನ್ನು ಜಿಲ್ಲಾ ಮತ್ತು ತಾಲ್ಲುಕು ಮಟ್ಟದಲ್ಲಿ ಅಧಿಕಾರಿಗಳು ನಡೆಸಲು ಕ್ರಮಕೈಗೊಳ್ಳುವಂತೆ ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಸೂಚಿಸಿದರು. ಈ ಕುರಿತು ಅಗತ್ಯ ಪ್ರಚಾರವನ್ನು ಪ್ಯಾಂಪ್ಲೆಟ್ಸ್, ಹೋರ್ಡಿಂಗ್ಸ್ ಅಳವಡಿಕೆ, ಪೋಸ್ಟರ್ ಮುದ್ರಣ, ಬ್ಯಾನರ್ಸ್, ಆಟೋಮೆಟೆಡ್ ಕಾಲ್ಸ್, ಟಿವಿ ಜಾಹೀರಾತು, ಆಟೋ ಪ್ರಚಾರ ಇತ್ಯಾದಿಗಳನ್ನು ಮಾಡುವುದೆಂದು, ಇದರಿಂದ ತ್ವರಿತವಾಗಿ ಅರ್ಹ ಕಾರ್ಮಿಕರಿಗೆ ಸೌಲಭ್ಯಗಳನ್ನು ತಲುಪಿಸಲು ಸಾಧ್ಯವಾಗುವುದರಿಂದ ಈ ಬಗ್ಗೆ ಕ್ರಮವಹಿಸಲು ತಿಳಿಸಿದರು. ಈ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.
2. ಮಂಡಳಿಯ ಸದಸ್ಯರಾದ ಶ್ರೀಮತಿ ಶಿವಾನಿ ಶಾಂತರಾಮ್ ಇವರು ಕಟ್ಟಡ ಕಾರ್ಮಿಕರ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 600 ಮತ್ತು ಮೇಲ್ಪಟ್ಟ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ನೀಡಬೇಕಾದ ಬಹುಮಾನವನ್ನು ನಿರ್ಣಯಿಸಬೇಕಾಗಿದೆಂದು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು ಪ್ರತಿ ವಿದ್ಯಾರ್ಥಿಗೆ ರೂ.10,000/-ಗಳಂತೆ ಅಕೌಂಟ್ ಪೇಯಿ ಚೆಕ್ ಮತ್ತು ಪ್ರಶಂಸನೀಯ ಪತ್ರವನ್ನು ವಿತರಿಸುವುದು. ಅಲ್ಲದೇ, ಪ್ರತಿಯೊಂದು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕ್ರಮ ಮಾಡುವುದರ ಮೂಲಕ ಪ್ರಚಾರ ಕೈಗೊಳ್ಳಲು ಸೂಚಿಸಿದರು. ಈ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.
3. ನಿಯಮ 49 ರಡಿಯಲ್ಲಿ ವಿತರಿಸಲಾಗುತ್ತಿರುವ ಮುದುವೆ ಸಹಾಯ ಧನ ಸೌಲಭ್ಯದಡಿ FD ಯಿಡುವುದರ ಬದಲಾಗಿ ಮಂಜೂರಾದ ಅರ್ಜಿಗಳ ಪೂರ್ಣ ಮೊತ್ತವನ್ನು ಆರ್ಹ ಫಲಾನುಭವಿಯ ಖಾತೆಗೆ ನಗದು ಜಮಾ ಮಾಡುವ ಕುರಿತು ಚರ್ಚಿಸಿ, ನಿರ್ಣಯಿಸಲಾಯಿತು.
4. ಮಂಡಳಿಯ ಸದಸ್ಯರಾದ ಶ್ರೀಮತಿ ಶಿವಾನಿ ಶಾಂತರಾಮ್ ಇವರು ಕಟ್ಟಡ ಕಾರ್ಮಿಕರ ಅವಲಂಬಿತ ಮಹಿಳೆಯರಿಗೆ ಟೂಲ್ ಕಿಟ್‌ಗಳನ್ನು ವಿತರಿಸಬೇಕೆಂದು ಕೋರಿಕೊಂಡರು. ಆದರೆ, ಮಾನ್ಯ ಅಧ್ಯಕ್ಷರು ನಿಯಮಾನುಸಾರ ಕೇವಲ ಕಟ್ಟಡ ಕಾರ್ಮಿಕರಿಗೆ ಮಾತ್ರ ಈ ಸೌಲಭ್ಯ ನೀಡಲು ಅವಕಾಶವಿರುತ್ತದೆ ಇತರರಿಗೆ ನೀಡಲು ಅವಕಾಶವಿಲ್ಲವೆಂದು ತಿಳಿಸಿದರು. ಆದರೆ ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಕೌಶಲ್ಯ ತರಬೇತಿಗಳೇನಾದರು ನೀಡಬಹುದಾಗಿರುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಸೂಕ್ತ ಯೋಜನೆ ರೂಪಿಸಲು ಮಂಡಳಿಯ ಕಾರ್ಯದರ್ಶಿಗಳಿಗೆ ಸೂಚಿಸಿ ಅಧ್ಯಕ್ಷರಿಗೆ ಅಧಿಕಾರ ನೀಡಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.
5. ಕೋವಿಡ್ ಮೊದಲನೇ ಮತ್ತು ಎರಡನೇ ಅಲೆಯಿಂದಾಗಿ ನೋಂದಾಯಿತ ಕಾರ್ಮಿಕರು ವಿವಿಧ ಸೌಲಭ್ಯಗಳಡಿ ಸಹಾಯಧನ ಪಡೆಯಲು ಅಗತ್ಯ ದಾಖಲೆಗಳನ್ನು ಪಡೆಯಲು ಮತ್ತು ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಲು ತಡವಾಗಿರುವುದರಿಂದ ಮಂಡಳಿಯಲ್ಲಿ ಅರ್ಜಿ ಸಲ್ಲಿಕೆಗೆ ನಿಗಧಿಪಡಿಸಿರುವ ಕಾಲಮಿತಿಯನ್ನು ಕೈಬಿಡುವಂತೆ ಹಲವಾರು ಕಾರ್ಮಿಕ ಸಂಘಟನೆಗಳು ಮಂಡಳಿಯನ್ನು ಕೋರಿರುವದರ ಬಗ್ಗೆ ಚರ್ಚಿಸಲಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಾವಳಿಗಳು 2006ರ ನಿಯಮ 49 ಸಿ ರಲ್ಲಿ ತಿಳಿಸಿರುವಂತೆ ಪಿಂಚಣಿ ಸೌಲಭ್ಯ ದುರ್ಬಲತೆ ಪಿಂಚಣಿ, ಹೆರಿಗೆ ಸಹಾಯಧನ, ಶೈಕ್ಷಣಿಕ ವೈದ್ಯಕೀಯ ಸಹಾಯಧನ ಪ್ರಮುಖ ವೈದ್ಯಕೀಯ ಸಹಾಯಧನ ಮತ್ತು ಮದುವೆ ಸಹಾಯಧನದ ಸೌಲಭ್ಯಗಳಡಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಗರಿಷ್ಠ 06 ತಿಂಗಳ ಕಾಲಮಿತಿಯನ್ನು ಒಂದು ವರ್ಷಕ್ಕೆ ಹೆಚ್ಚಿಸಲು

ತೀರ್ಮಾನಿಸಿ ಕೂಡಲೇ ಮಂಡಳಿಯಿಂದ ಸೂಕ್ತ ಆದೇಶವನ್ನು ಹೊರಡಿಸಿ, ತದನಂತರ ಸರ್ಕಾರಕ್ಕೆ ಘಟನೋತ್ತರ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

6. ಮಂಡಳಿಯ ನೋಂದಾಯಿತ ಕಾರ್ಮಿಕರ ಮಕ್ಕಳಿಗೆ ಟ್ಯಾಬ್ / ಲ್ಯಾಪ್ ಟ್ಯಾಪ್ ಗಳನ್ನು ವಿತರಿಸಲು ಈಗಾಗಲೇ ಮಂಡಳಿಯ ಸಭೆಯಲ್ಲಿ ನಿರ್ಣಯಿಸಿರುವಂತೆ ಈ ಶೈಕ್ಷಣಿಕ ವರ್ಷದಲ್ಲಿಯೇ ವಿತರಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಮಂಡಳಿಯ ಕಾರ್ಯದರ್ಶಿಗಳಿಗೆ ಸೂಚಿಸಿದರು. ಆ ಸಂದರ್ಭದಲ್ಲಿ ಮಾನ್ಯ ಕಾರ್ಯದರ್ಶಿಗಳು ಸರ್ಕಾರದ ಹಂತದಲ್ಲಿ ಸ್ಪೆಸಿಫಿಕೇಶನ್ ಅಂತಿಮಗೊಂಡ ತಕ್ಷಣ ಕ್ರಮವಹಿಸಲಾಗುವುದೆಂದು ತಿಳಿಸಿದರು. ತದನಂತರ 2022-23ನೇ ಸಾಲಿನಲ್ಲಿ 06 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಟ್ಯಾಬ್ ಗಳನ್ನು ನೀಡಲು ಮೆ॥ ಕಿಯೋನಿಕ್ಸ್ ಸಂಸ್ಥೆ ವತಿಯಿಂದ ಅಂದಾಜು ದರಗಳನ್ನು ಪಡೆದು ಬೇಡಿಕೆಯನುಸಾರ ಜಿಲ್ಲಾವಾರು ಟ್ಯಾಬ್ ಗಳನ್ನು ವಿತರಣೆ ಮಾಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಲಾಯಿತು.

7. ಮಂಡಳಿಯಿಂದ ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳು ಹಾಗೂ ಜನ ಪ್ರತಿನಿಧಿಗಳ ಬೇಡಿಕೆಗಳುನುಸಾರ ನೋಂದಾಯಿತ ಕಾರ್ಮಿಕರಿಗೆ ಅವರು ಕೆಲಸ ನಿರ್ವಹಿಸುವ ವೃತ್ತಿಗನುಗುಣವಾಗಿ ಮೇಸನ್, ಪೈಂಟರ್, ಎಲೆಕ್ಟ್ರಿಷಿಯನ್, ಪ್ಲಂಬಿಂಗ್, ಬಾರ್ ಬೆಂಡಿಂಗ್ ಮತ್ತು ಕಾರ್ಪೆಂಟರಿ ಟೂಲ್ ಕಿಟ್‌ಗಳನ್ನು ನೀಡಲಾಗುತ್ತದೆ. ಆದರೆ, ಈ ವೃತ್ತಿಗಳಲ್ಲದೆ ಇನ್ನು ಹಲವಾರು ವೃತ್ತಿಗಳಲ್ಲಿ ಕೆಲಸ ಮಾಡುವ ವಿವಿಧ ವೃತ್ತಿಯ ಕಾರ್ಮಿಕರು ಸಹ ಮಂಡಳಿಯಲ್ಲಿ ನೋಂದಣಿಯಾಗುತ್ತಿದ್ದು, ಅವರಿಗೂ ಸಹ ಟೂಲ್ ಕಿಟ್‌ಗಳನ್ನು ನೀಡುವಂತೆ ಮಂಡಳಿಯ ಸದಸ್ಯರು ಮಾನ್ಯ ಅಧ್ಯಕ್ಷರನ್ನು ಕೋರಿದರು. ಆಗ ಮಾನ್ಯ ಅಧ್ಯಕ್ಷರು ನೋಂದಾಯಿತ ಕಾರ್ಮಿಕರಿಗೆ ಕೆಲಸ ನಿರ್ವಹಿಸಲು ಮತ್ತು ಅವರ ಆರ್ಥಿಕ ಹೊರೆಯನ್ನು ತಗ್ಗಿಸಲು ಅವಶ್ಯಕವಾಗಿ ನೀಡಬಹುದಾದ ಟೂಲ್‌ಕಿಟ್‌ಗಳನ್ನು ವಿತರಿಸಬಹುದಾಗಿದೆ ಎಂದು ತಿಳಿಸಿದರು. ಇದಕ್ಕೆ ಸಬೆಯ ಸರ್ವ ಸದಸ್ಯರು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿದರು.

(ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್)
ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ
ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ
ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ,
ಬೆಂಗಳೂರು